ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 23
೬ ಏಪ್ರಿಲ್ ೧೯೫೮
*
ಪುಟ ೧೦ ಬೆಲೆ: ೧೩ ನ. ಪೈಸೆ
★

ಕೇರಳದಲ್ಲಿ ಜನಪ್ರಿಯ ಆಡಳಿತೆಯ ಒಂದು ವರ್ಷ

ಏಪ್ರಿಲ್ 5, 1957. ಭಾರತದ ರಾಜ್ಯಗಳಲ್ಲೊಂದಾದ ಕೇರಳ ರಾಜ್ಯದಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಜನಪ್ರಿಯ ಸರಕಾರ ಸ್ಥಾಪನೆಯಾಯಿತು. ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ಇ. ಎಂ. ಎಸ್. ನಂಬೂದ್ರಿಪಾದ್‌ರವರ ನೇತೃತ್ವದಲ್ಲಿ ಕಮ್ಯೂನಿಸ್ಟ್ ಸರಕಾರವು ಕೇರಳದಲ್ಲಿ ಅಸ್ತಿತ್ವಕ್ಕೆ ಬಂದು ಒಂದ ವರ್ಷ ತುಂಬಿದೆ. ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಸರಕಾರ ಕಳೆದ ವರ್ಷ ಸ್ಥಾಪಿತವಾದ ಕೂಡಲೇ ಎಲ್ಲೆಡೆಗಳಲ್ಲಿಯೂ ಪ್ರತಿಕ್ರಿಯೆಗಳು ಬಂದುವು. ಸರಕಾರದ ಪರವಾಗಿ ಹಾಗೂ ವಿರೋಧವಾಗಿ ರಾಷ್ಟ್ರದೊಳಗೂ ಹೊರಗೂ ಅಭಿಪ್ರಾಯಗಳೂ ವ್ಯಕ್ತಗೊಂಡುವು. ಚುನಾವಣೆಗಳಲ್ಲಿ ನಂಬುಗೆಯಿಲ್ಲದ, ಹಿಂಸಾತ್ಮಕ ಕ್ರಾಂತಿಯಲ್ಲಿ ದೃಢ ವಿಶ್ವಾಸವುಳ್ಳ ಕಮ್ಯೂನಿಸ್ಟರು ಅಧಿಕಾರಕ್ಕೆ, ಅದೂ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆಯ ಮೂಲಕ ಬಂದಿರುವುದು ಆಶ್ಚರ್ಯಕರವೆಂದು ಉದ್ಗಾರಗಳು ಹೊರಟವು. ಅಷ್ಟೇ ಅಲ್ಲ ಪ್ರಜಾಪ್ರಭುತ್ವವನ್ನು ತುಳಿದು ಸರ್ವಾಧಿಕಾರ ಸ್ಥಾಪಿಸುವುದರಲ್ಲಿ ಕಮ್ಯೂನಿಸ್ಟರು ತೊಡಗುವುದರಿಂದ ಭಾರತ ಸ್ವಾತಂತ್ರ್ಯಕ್ಕೇ ವಿಪತ್ತು ಎಂದು ವ್ಯಾಖ್ಯೆ ನೀಡಿದರು ಪ್ರತಿಗಾಮಿಗಳ ಎಣಿಕೆ ತಪ್ಪಾಯಿತು.

ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿರುವ

ನ್ಯಾಯಾಂಗ ಸಚಿವ
ವಿ. ಆರ್. ಕೃಷ್ಣ ಐಯ್ಯರ್



ಆರ್ಥಿಕ ಸಚಿವ
ಸಿ. ಅಚ್ಯುತ ಮೆನನ್



ರೆವೆನ್ಯೂ ಸಚಿವೆ
ಕೆ. ಆರ್. ಗೌರಿ



ಆಹಾರ ಸಚಿವ
ಕೆ. ಸಿ. ಜಾರ್ಜ್



ಕಾರ್ಮಿಕ ಸಚಿವ
ಟಿ. ವಿ. ಥಾಮಸ್



ಮುಖ್ಯಮಂತ್ರಿ
ಇ. ಎಂ. ಎಸ್. ನಂಬೂದ್ರಿಪಾದ್



ಪಬ್ಲಿಕ್‌ವರ್ಕ್ಸ್ ಸಚಿವ
ಟಿ. ಎ. ಮಜೀದ್



ಕೇರಳ ಸರಕಾರ ಚಿರಾಯುವಾಗಲಿ!

ವಿದ್ಯಾ ಸಚಿವ
ಜೊಸೆಫ್ ಮುಂಡಾಸೇರಿ



ಸ್ಥಳೀಯಸಂಸ್ಥೆ ಸಚಿವ
ಪಿ. ಕೆ. ಚಾತನ್



ಕೈಗಾರಿಕೆ ಸಚಿವ
ಕೆ. ಪಿ. ಗೋಪಾಲನ್



ಆರೋಗ್ಯ ಸಚಿವ
ಎ. ಆರ್. ಮೆನನ್



ಭಾರತ ರಾಜ್ಯಾಂಗವನ್ನು ಕಮ್ಯೂನಿಸ್ಟರು ಒಪ್ಪುವುದಿಲ್ಲವಾದ್ದರಿಂದ, ತಮ್ಮ ಗುರಿಯನ್ನು ಮುಟ್ಟಲು ಘಟನೆಯಡಿಯಲ್ಲಿ ಸಾಧ್ಯವಿಲ್ಲದಿರುವುದರಿಂದ ಕಮ್ಯೂನಿಸ್ಟರು ಹೆಚ್ಚು ದಿನ ಅಧಿಕಾರದಲ್ಲಿರುವುದು ದುಃಸ್ಸಾಧ್ಯ. ಕೇಂದ್ರ ಸರಕಾರದಲ್ಲಿ ಕಾಂಗ್ರೆಸ್ ಆಡಳಿತದಲ್ಲಿರುವುದರಿಂದ ಇತರ ರಾಜ್ಯಗಳಲ್ಲಿಯೂ ಸಹ ಕಾಂಗ್ರೆಸ್ ಆಡಳಿತೆಯಲ್ಲಿರುವುದರಿಂದ, ಕೇಂದ್ರಕ್ಕೂ ಕೇರಳ ಸರಕಾರಕ್ಕೂ ಘರ್ಷಣೆ ಬಂದು ಕೇರಳದಲ್ಲಿ ಕಮ್ಯೂನಿಸ್ಟರು ಅಧಿಕಾರ ತ್ಯಜಿಸಬೇಕಾಗುವುದು. ಕಮ್ಯೂನಿಸ್ಟರು ಸ್ವತಂತ್ರರನ್ನೊಳಗೊಂಡ ಸರಕಾರ ರಚಿಸಿರುವುದರಿಂದ, ಶಾಸನ ಸಭೆಯಲ್ಲಿ ಅಲ್ಪ ಬಹುಮತವಿರುವುದರಿಂದ, ಸ್ವತಂತ್ರರು ಎಂದಿದ್ದರೂ ಕೈಬಿಡುವುದರಿಂದ ಸರಕಾರ ಉರುಳುವುದು ಖಂಡಿತ. ಹೀಗೆ ನಾನಾ ಊಹಾಪೋಹಗಳನ್ನು ಮಾಡಿಕೊಂಡು, ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಕೆಲತಿಂಗಳುಗಳಲ್ಲೇ ಉರುಳುವುದು ಖಚಿತವೆಂದು ಮನಸ್ಸಿನಲ್ಲೇ ಮುಂದಿಗೆ ತಿನ್ನುತ್ತಿದ್ದ ಪ್ರತಿಗಾಮಿಗಳ ಕನಸು ಇಂದು ಕನಸಾಗಿಯೇ ಉಳಿದಿದೆ. ಸರಕಾರ ಅಸ್ತಿತ್ವಕ್ಕೆ ಬಂದು ಒಂದು ವರ್ಷ ಸಂದಿದೆ.

ಜನಪ್ರಿಯ ಆಡಳಿತೆ

ಕಳೆದ ಹತ್ತು ವರ್ಷಗಳಲ್ಲಿ ಕಾಂಗ್ರೆಸ್, ಪ್ರಜಾ ಸೋಷಲಿಸ್ಟ್ ಮತ್ತು ಅಧ್ಯಕ್ಷರ ಆಡಳಿತೆಯನ್ನು ಸವಿದಿದ್ದ ಕೇರಳ ಜನತೆ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಸರಕಾರದ ಆಡಳಿತೆಯನ್ನು ಒಂದು ವರ್ಷ ಅನುಭವಿಸಿದೆ. ರಾಜ್ಯ ಪುನರ್ ಘಟನೆಯ ನಂತರದಲ್ಲಿ ಪ್ರಥಮ ಬಾರಿಗೆ ಕೇರಳದಲ್ಲಿ ಜನಪ್ರಿಯ ಸರಕಾರ ಸ್ಥಾಪನೆಗೊಂಡಿತು.

ಏಪ್ರಿಲ್ 5ರಂದು ಅಧಿಕಾರ ವಹಿಸಿಕೊಂಡ ಕೂಡಲೇ ಮುಖ್ಯ ಮಂತ್ರಿಗಳಾದ ಶ್ರೀ ನಂಬೂದ್ರಿಪಾದ್‌ರವರು ಹೇಳಿಕೆಯೊಂದನ್ನಿತ್ತು ಸರಕಾರವು ಅನುಸರಿಸುವ ಧೋರಣೆಯನ್ನು ಕುರಿತು ವಿವರವಿತ್ತರು. ರಾಜ್ಯಾಂಗ ಘಟನೆಯ ಚೌಕಟ್ಟಿನಲ್ಲಿ ಆಡಳಿತ ನಡೆಸಿಕೊಂಡು, ಜನತೆಯ ಅಭ್ಯುದಯಕ್ಕಾಗಿ, ಕೇರಳ ರಾಜ್ಯದ ಅಭಿವೃದ್ಧಿಗಾಗಿ ಕಮ್ಯೂನಿಸ್ಟ್ ಪಕ್ಷದ ಸರಕಾರವು ಶ್ರಮಿಸುವುದೆಂದು ಜನತೆಗೆ ಆಶ್ವಾಸನೆ ಇತ್ತರು. ಘಟನೆಯಡಿಯಲ್ಲಿ ಸಾಧ್ಯವಿರುವ ಎಲ್ಲ ಸುಧಾರಣೆಗಳನ್ನು ಜಾರಿಯಲ್ಲಿ ತರುವುದಾಗಿ ಘೋಷಿಸಿದರು. ಈ ದಿಶೆಯಲ್ಲಿ ಕೇರಳ ಸರಕಾರ ಒಂದು ವರ್ಷದಲ್ಲಿ ಮಹತ್ವಪೂರ್ಣವಾದ ಸಾಧನೆಯನ್ನು ಕಂಡಿದೆ.

ಅಧಿಕಾರಕ್ಕೆ ಬಂದ ಒಡನೆಯೇ ರಾಜಕೀಯ ಕೈದಿಗಳೆಲ್ಲರ ಬಿಡುಗಡೆ ಮಾಡಿತು. ಮರಣದಂಡನೆಗೀಡಾಗಿದ್ದವರಿಗೆ ಜೀವದಾನವಿತ್ತಿತು. ಕೇರಳ ಸರಕಾರದ ಈ ಪ್ರಥಮ ಕಾರ್ಯವನ್ನು ಕಾಂಗ್ರೆಸ್ಸಿಗರು ಪ್ರತಿಗಾಮಿಗಳು ಟೀಕಿಸಿ ಬೊಬ್ಬೆ ಹಾಕಿದರು. ಆದರೆ ಅದು ನಿಷ್ಪ್ರಯೋಜಕವಾಯಿತು.

ಗಾಂಧೀಜಿಯ ಔರಸ ಪುತ್ರರೆಂದೂ ನಿರಾಡಂಬರವಾದ ಜೀವನ ನಡೆಸಬೇಕೆಂದೂ ಬೋಧಿಸುತ್ತಿರುವ ಕಾಂಗ್ರೆಸ್ ಮಂತ್ರಿಗಳು ಅಧಿಕಾರ ವಹಿಸಿಕೊಂಡ ಮೇಲೆ ತಮ್ಮ ಹೇಳಿಕೆಗಳನ್ನೆಲ್ಲಾ ಗಾಳಿಗೆ ತೂರುತ್ತಿದ್ದಾರೆ. ಮಂತ್ರಿಗಳ ಸಂಬಳವನ್ನು ಖೋತಾ ಮಾಡಬೇಕೆಂದೂ, ಮಂತ್ರಿಗಳೇ ಪ್ರಥಮವಾಗಿ ನಿರಾಡಂಬರ ಜೀವನ ನಡೆಸಬೇಕೆಂದೂ ಹೇಳುತ್ತಿದ್ದರೂ ಸಹ ಕಾರ್ಯತಃ ಅದು ಜಾರಿಯಲ್ಲಿ ಬರಲಿಲ್ಲ. ಆದರೆ ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷವು ಅಧಿಕಾರ ವಹಿಸಿಕೊಂಡ ಕೂಡಲೇ ಮಂ

(ಕೊನೇ ಪುಟ ನೋಡಿ)

ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಕಾಂಗ್ರೆಸ್ಸಿಗೆ ಸವಾಲಿನಂತಿದೆ

ವಿರೋಧಿಗಳ ಅಪಪ್ರಚಾರ ಒಂದು ಸುಳ್ಳಿನ ಕಂತೆ

ಕಳೆದ ಒಂದು ವರ್ಷದಿಂದ ಕೇರಳದಲ್ಲಿ ಅಧಿಕಾರ ನಡೆಸುತ್ತಿರುವ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಸರಕಾರವು ಕಾಂಗ್ರೆಸ್ ಆಡಳಿತೆಗಳಿಗೆ ಸವಾಲಿನಂತಿದೆ. ಆಡಳಿತೆ ನಡೆಸುವುದರಲ್ಲಿ ಕಮ್ಯೂನಿಸ್ಟ್ ಪಕ್ಷವು ತನ್ನ ದಕ್ಷತೆಯನ್ನು ಒಂದು ವರ್ಷದ ಅವಧಿಯಲ್ಲಿ ತೋರಿಸಿಕೊಟ್ಟಿದೆ. ಸರಕಾರದ ನೀತಿಗಳು, ಜನತೆಗೆ ಸಹಾಯಕವಾಗುವ ಸುಧಾರಣೆಗಳನ್ನು ತಂದಿದೆ. ಸರಕಾರದ ಎಲ್ಲ ಕ್ರಮಗಳನ್ನೂ ವಿರೋಧ ಪಕ್ಷಗಳಾದ ಕಾಂಗ್ರೆಸ್, ಪಿ. ಎಸ್. ಪಿ. ಮುಸ್ಲಿಂ ಲೀಗ್‌ಗಳು ವಿರೋಧಿಸುತ್ತಿವೆ. ವಿಶಿಷ್ಟವಾದ ಯಾವ ಆರೋಪವನ್ನೂ ಮಾಡಲಾಗದೆ ವಿರೋಧ ಪಕ್ಷಗಳು ಸರಕಾರದ ಮೇಲೆ ಸುಳ್ಳಿನ ಕಂತೆಯನ್ನು ಕಟ್ಟಿ ಅಪಪ್ರಚಾರ ನಡೆಸುತ್ತಿದೆ.

ನ್ಯಾಯ ಪರಿಪಾಲನೆಯ ಪೊಳ್ಳು ಆರೋಪ

ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಆಡಳಿತೆ ವಹಿಸಿಕೊಂಡ ನಂತರದಲ್ಲಿ, ಅಶಿಸ್ತು ಹೆಚ್ಚಾಗಿದೆ, ನ್ಯಾಯ ಪಂಪಾಲನೆಯಾಗುತ್ತಿಲ್ಲ; ಪೋಲೀಸು ನಿಷ್ಕ್ರಿಯವಾಗಿದೆ, ಖಾಸಗಿ ಸ್ವತ್ತು ಹಾಗೂ ಜೀವನಕ್ಕೆ ರಕ್ಷಣೆ ಇಲ್ಲವಾಗಿದೆ ಎಂದೆಲ್ಲ ನೂರಾರು ಆರೋಪಗಳನ್ನು ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳವರು ಮಾಡುತ್ತಿದ್ದಾರೆ. ತಮ್ಮ ಇಡೀ ಸಂಘಟನೆಯನ್ನು ಈ ಪ್ರಚಾರಕ್ಕಾಗಿ ಉಪಯೋಗಿಸುತ್ತಿದ್ದಾರೆ. ಸರಕಾರಕ್ಕೆ ಕಾನೂನು ಭಂಗವನ್ನು ತಡೆಗಟ್ಟಲು ಸಾಮರ್ಥ್ಯವಿಲ್ಲವಾಗಿದೆ ಎಂದು ಆರೋಪಿಸಿ, ಶಿಸ್ತು, ಕಾನೂನು ಪರಿಪಾಲಿಸಲಾಗದೇ ಇರುವ ಸರಕಾರವು ಅಧಿಕಾರ ತ್ಯಜಿಸಬೇಕೆಂದು ಚಳವಳಿ ನಡೆಸಲಾಗುತ್ತಿದೆ.

ಆದರೆ ನಿಜಸ್ಥಿತಿ ಬೇರೆಯೇ ಇದೆ. ಇತರ ರಾಜ್ಯಗಳಿಗೆ ಹೋಲಿಸಿ ನೋಡಿದಲ್ಲಿ ಕೇರಳದಲ್ಲಿ ಕಳ್ಳತನ, ದರೋಡೆ, ಕೊಲೆ, ಮತ್ತಿತರ ಕಾನೂನು ಭಂಗ ಕಾರ್ಯಗಳ ಸಂಖ್ಯೆ ಕಡಿಮೆಯಾಗಿದೆ ಎಂಬುದನ್ನು ಕೇಂದ್ರ ಸರಕಾರ ಒದಗಿಸಿರುವ ಅಂಕಿಅಂಶಗಳಿಂದಲೇ ಕಂಡುಹಿಡಿಯಬಹುದು. 1957ರ ಸಾಲಿನಲ್ಲಿ ವಿವಿಧ ರಾಜ್ಯಗಳಲ್ಲಿ ಸಂಭವಿಸಿರುವ ಕೊಲೆ, ದರೋಡೆ, ಡಕಾಯಿತಿ, ಮತ್ತಿತರ ಅಪಾದನೆಗಳ ಸಂಖ್ಯೆ ಈ ಕೆಳಕಂಡಂತಿದೆ:—

ರಾಜ್ಯ—	ಜನಸಂಖ್ಯೆ (ಕೋಟಿ)	ಅಪಾದನೆಗಳ ಸಂಖ್ಯೆ
ಆಂಧ್ರ	3·12	8,130
ಮುಂಬಯಿ	4·8	28,368
ಮದರಾಸ್	2·99	13,296
ಪ. ಬಂಗಾಳ	2·6	16,340
ಬಿಹಾರ	3·8	16,464
ಮೈಸೂರು	1·9	4,541
ಕೇರಳ	1·35	3,282

ಮೇಲಿನ ಈ ಅಂಕಿ ಅಂಶಗಳು ವಿರೋಧ ಪಕ್ಷಗಳ ಆರೋಪಗಳಿಗೆ ಸರಿಯಾದ ಬದಲನ್ನೀಯುತ್ತದೆ.

ಆಡಳಿತದ ದುರುಪಯೋಗ ಇಲ್ಲ

ಕಮ್ಯೂನಿಸ್ಟ್ ಪಕ್ಷವು ಅಧಿಕಾರವನ್ನು ಪಕ್ಷವನ್ನು ಬೆಳಸಿಕೊಳ್ಳಲು ದುರುಪಯೋಗಪಡಿಸಿಕೊಳ್ಳುತ್ತಿದೆ, ಪಕ್ಷದ ಸದಸ್ಯರುಗಳು ಆಡಳಿತೆಯಲ್ಲಿ ಪ್ರವೇಶಿಸುತ್ತಾರೆಂಬ ಆರೋಪವನ್ನು ವಿರೋಧ ಪಕ್ಷಗಳವರು ಮಾಡಿದ್ದಾರೆ. ಕಮ್ಯೂನಿಸ್ಟ್ ಪಕ್ಷದ ಘಟಕಗಳು ನ್ಯಾಯಾಸ್ಥಾನಗಳಾಗಿ ಮಾರ್ಪಟ್ಟಿವೆ, ದುಂಡಾವೃತ್ತಿ ನಡೆಸುತ್ತಿವೆ ಎಂದು ಹೇಳಲಾಗಿದೆ.

ಮೊದಲನೆಯದಾಗಿ ಕಮ್ಯೂನಿಸ್ಟ್ ಪಕ್ಷದ ಘಟಕಗಳು ಘಟನಾತ್ಮಕವಾಗಿ ಈಗ ಇಲ್ಲವಾಗಿದೆ. ಅದರ ಸ್ಥಾನದಲ್ಲಿ ಪಾರ್ಟಿ ಶಾಖೆಗಳು ಮಾತ್ರ ಇವೆ. ವಿರೋಧ ಪಕ್ಷಗಳು ಈ ಆರೋಪಗಳನ್ನು ಮಾಡುತ್ತಿದ್ದರೂ ಸಹ ಅದಕ್ಕೆ ಯಾವ ಪುರಾವೆಯನ್ನು ಈವರೆಗೆ ಕೊಟ್ಟಿಲ್ಲ. ಕಮ್ಯೂನಿಸ್ಟ್ ಪಕ್ಷವು ಆಡಳಿತೆಯ ನಿರ್ವಹಣೆಯಲ್ಲಿ ಪ್ರವೇಶಿಸುವುದಿಲ್ಲವೆಂದು ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎಂ.ಎನ್. ಗೋವಿಂದನ್ ನಾಯರ್‌ರವರು ಘೋಷಿಸಿದ್ದಾರೆ. ವಿರೋಧ ಪಕ್ಷಗಳವರು ಆರೋಪ ಮಾಡುತ್ತಿರುವುದಕ್ಕೆ ಯಾವುದಾದರೂ ಒಂದು ನಿದರ್ಶನವಿತ್ತಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದೆಂಬ ಆಶ್ವಾಸನೆಯನ್ನು ಇತ್ತಿದ್ದಾರೆ. ವಿರೋಧ ಪಕ್ಷಗಳ ಈ ಆರೋಪ ಕೇವಲ ಎಷ್ಟು ಸುಳ್ಳೆಂಬುದು ಇದರಿಂದ ನಿರೂಪಿತವಾಗುತ್ತದೆ.

ಪೋಲೀಸು ದಬ್ಬಾಳಿಕೆ ಇಲ್ಲವೇ ಇಲ್ಲವಾಗಿದೆ

ಕೇರಳದಲ್ಲಿ ಪೋಲೀಸರ ದಬ್ಬಾಳಿಕೆ ಇಲ್ಲವೇ ಇಲ್ಲವಾಗಿದೆ. ಭಾರತದ ಇತರೇ ರಾಜ್ಯಗಳಲ್ಲಿ ಪೋಲೀಸರ ದಬ್ಬಾಳಿಕೆ ದಿನನಿತ್ಯ ನಡೆಯುತ್ತಿದೆ. ಪ್ರತಿಬಂಧಕಾಜ್ಞೆಗಳಾದ 144ನೇ ಸೆಕ್ಷನ್ ಇತ್ಯಾದಿಗಳನ್ನು ಜಾರಿಗೊಳಿಸಲಾಗುತ್ತಿದೆ. ನಮ್ಮ ಮೈಸೂರು ರಾಜ್ಯದಲ್ಲಿ ವಿಮಾನ ಕಾರ್ಖಾನೆ ನೌಕರರ ಹೋರಾಟ ಸಂದರ್ಭದಲ್ಲಿ ಅನವಶ್ಯಕವಾಗಿ 144ನೇ ಸೆಕ್ಷನ್ ಜಾರಿ ಮಾಡಿ, ನೌಕರರ ಮೆರವಣಿಗೆಯ ಮೇಲೆ ಗುಂಡು ಹಾರಿಸಿ, ಒಬ್ಬರ ಮರಣವೂ ಸಂಭವಿಸಿದೆ. ಅನೇಕ ಪೋಲೀಸು ಕೇಸುಗಳನ್ನು ಹಾಕಲಾಗಿದೆ. ಆದರೆ ಕೇರಳದಲ್ಲಿ ಇಂಥ ಘಟನೆ ಸಂಭವಿಸಿಲ್ಲ. ವಿದ್ಯಾಭ್ಯಾಸ ಮಸೂದೆಯ ಬಗ್ಗೆ ಅತಿ ದೊಡ್ಡ ಪ್ರದರ್ಶನವು ನಡೆದಾಗ್ಯೂ ಸಹ ಕೇರಳ ಸರಕಾರ ಪೋಲೀಸನ್ನು ಉಪಯೋಗಿಸಲಿಲ್ಲ. ಇತರೇ ರಾಜ್ಯ ಸರಕಾರಗಳು ಪೋಲೀಸರ ಅತ್ಯಾಚಾರದ ಬಗ್ಗೆ ವಿಚಾರಣೆ ನಡೆಸಲು ನಿರಾಕರಿಸಿದರೆ, ಕೇರಳ ಸರಕಾರ, ಅತ್ಯಂತ ಅಲ್ಪವಾದ ಲಾಠಿ ಪ್ರಯೋಗ ನಡೆದದ್ದಕ್ಕೂ ಸಹ ವಿಚಾರಣೆಯನ್ನು ನಡೆಸಿದೆ. ಇದರಿಂದ ಕೇರಳ ಸರಕಾರದ ಪ್ರಜಾಪ್ರಭುತ್ವ ಆಡಳಿತ ನೀತಿ ವ್ಯಕ್ತವಾಗುತ್ತಿದೆ. ಟ್ರೇಡ್ ಯೂನಿಯನ್ ಪ್ರದರ್ಶನಗಳ ಮೇಲೆ, ಇತರೇ ಸಾರ್ವಜನಿಕ ಪ್ರದರ್ಶನಗಳ ಮೇಲೆ ಪೋಲೀಸರನ್ನು ಬಳಸುವುದಿಲ್ಲವೆಂದು ಸರಕಾರ ಘೋಷಿಸಿದೆ, ಅದನ್ನು ಅಕ್ಷರಶಹ ಪಾಲಿಸುತ್ತಿದೆ.

ವಿರೋಧ ಪಕ್ಷಗಳು ಸರಕಾರದ ಈ ಧೋರಣೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿವೆ. ರಾಜ್ಯದಲ್ಲಿ ಅನಾಯಕತೆಯನ್ನುಂಟುಮಾಡಲು ಯತ್ನಿಸುತ್ತಿವೆ. ಗೂಂಡಾಗಿರಿ ನಡೆಸುತ್ತಿವೆ. ಕ್ಯಾಥೊಲಿಕ್ ಸಂಘಟನೆಯಾದ 'ಕ್ರಿಸ್ಟಾಫರ್' ಸಂಸ್ಥೆಯು ಸರಕಾರದ ವಿರೋಧವಾಗಿ ಸಶಸ್ತ್ರ ಸ್ವಯಂಸೇವಕರ ಪಡೆಯನ್ನೇ ಉಂಟುಮಾಡುತ್ತಿದೆ. ಸರಕಾರವು ಇಂಥ ಕಾನೂನು ವಿರೋಧ ಚಟುವಟಿಕೆಗಳ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳುವುದೆಂದು ಎಚ್ಚರಿಕೆ ಇತ್ತಿದೆ. ಹೇಗಾದರೂ ಮಾಡಿ ಸರಕಾರದ ಜನಪ್ರಿಯತೆಯನ್ನು ಕುಂಠಿತಗೊಳಿಸಲು ವಿರೋಧ ಪಕ್ಷಗಳು ಯತ್ನಿಸುತ್ತಿದೆ. ಆದರೆ ಈ ಯತ್ನ ಮಣ್ಣುಗೂಡುವುದು ಖಂಡಿತ.

ಕಾಂಗ್ರೆಸ್ ಪಿ.ಎಸ್.ಪಿ.ಗಳ ಮೂರ್ಖತನ !

ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್, ಪಿ.ಎಸ್.ಪಿ. ಮುಸ್ಲಿಂ ಲೀಗ್‌ಗಳು ಒಟ್ಟುಗೂಡಿ ಸರಕಾರದ ಎಲ್ಲ ಕ್ರಮಗಳನ್ನು ವಿರೋಧಿಸುತ್ತಿದೆ. ತೀವ್ರ ಜಾತೀಯವಾದಿಗಳೊಂದಿಗೆ ಕಾಂಗ್ರೆಸು ಕೂಡಿಕೊಂಡಿರುವುದು ಶೋಚನೀಯವಾಗಿದೆ. ಸರಕಾರವನ್ನು ಉರುಳಿಸಲು ಈ ಮೂರು ಪಕ್ಷಗಳೂ ಐಕ್ಯರಂಗ ಸ್ಥಾಪಿಸಲು ಯತ್ನಿಸುತ್ತಿವೆ.

ಸರಕಾರದ ಮೇಲೆ ಹೇಯವಾದ ಅಪಾದನೆಗಳನ್ನು ಹೊರಿಸುವುದೇ ಅಲ್ಲದೆ, ರಾಜ್ಯದಲ್ಲಿ ಅಶಿಸ್ತು ಕಾನೂನು ಭಂಗ ಇವು ನಡೆಯುತ್ತಿದೆಯೆಂದು ಆರೋಪಿಸುತ್ತಾ ಈ ವಿರೋಧ ಪಕ್ಷಗಳು ತಾವೇ ಅಂಥ ಕಾರ್ಯಗಳಿಗೆ ಉತ್ತೇಜನ ಕೊಡುತ್ತಿವೆ. ಕಾಂಗ್ರೆಸು ತನ್ನ ಪಕ್ಷದಲ್ಲೇ ಇರುವ ಒಳಜಗಳವನ್ನು ಪರಿಹರಿಸಿಕೊಳ್ಳಲಾಗದೆ, ಕಮ್ಯೂನಿಸ್ಟ್ ಪಕ್ಷದ ಮೇಲೆ ವಿಷಕಾರುತ್ತಿದೆ. ಶಾಸನ ಸಭೆಯ ಕಾರ್ಯಕಲಾಪಗಳನ್ನು ಪರಿಶೀಲಿಸಿದಲ್ಲಿ ಕಾಂಗ್ರೆಸ್ ಪಿ. ಎಸ್. ಪಿ. ಮತ್ತು ಮುಸ್ಲಿಂ ಲೀಗಿನ ಮೂರ್ಖತನ ಎದ್ದು ಕಾಣುತ್ತಿದೆ. ವಿರೋಧ ಪಕ್ಷದಲ್ಲಿರುವ ಈ ಪಕ್ಷಗಳು ಸರಕಾರವನ್ನು ರಚನಾತ್ಮಕವಾಗಿ ಟೀಕಿಸುವ ಬದಲು ಮನಬಂದಂತೆ ಆರೋಪಗಳನ್ನು ಹೊರಿಸುತ್ತಿವೆ. ವಿರೋಧ ಪಕ್ಷಗಳ ಈ ನಡವಳಿಕೆಯಿಂದ ಯಾವ ಪ್ರಯೋಜನವೂ ಆಗದು.

ಭಾರತದ ಇತರ ರಾಜ್ಯಗಳಲ್ಲಿ ಕಾಂಗ್ರೆಸ್ ಸರಕಾರಗಳು ಆಡಳಿತೆಯಲ್ಲಿದ್ದು, ಕೇರಳ ಒಂದರಲ್ಲೇ ಕಮ್ಯೂನಿಸ್ಟ್ ಪಕ್ಷ ಅಧಿಕಾರದಲ್ಲಿರುವುದು ಕಾಂಗ್ರೆಸ್ ಆಡಳಿತೆಗಳಿಗೆ ಸವಾಲಿನಂತಿದೆ. ಈ ಒಂದು ವರ್ಷದ ಅವಧಿಯಲ್ಲಿ ಹಲವು ರಾಜ್ಯ ಸರಕಾರಗಳಲ್ಲಿ ಬಿಕ್ಕಟ್ಟು ಬಂದಿದೆ, ಕಾಂಗ್ರೆಸ್ ಪಕ್ಷದಲ್ಲಿ ಒಡಕು ಉಂಟಾಗುತ್ತಿದೆ, ಒಳಜಗಳ ಹೆಚ್ಚಿ, ಮಂತ್ರಿಮಂಡಲಗಳ ಮೇಲೆ ಅವಿಶ್ವಾಸ ನಿರ್ಣಯಗಳು ಬರುತ್ತಿವೆ. ಕೇರಳ ಮುಖ್ಯ ಮಂತ್ರಿ ಇ. ಎಂ. ಎಸ್.ರವರು ಕೆಲವು ದಿನಗಳ ಹಿಂದೆ 'ನ್ಯೂಯಾರ್ಕ್ ಟೈಂಸ್' ಪತ್ರಿಕಾ ಪ್ರತಿನಿಧಿಯ ಪ್ರಶ್ನೆಗಳಿಗೆ ಉತ್ತರ ಕೊಡುತ್ತ, ಮುಂದಿನ ಚುನಾವಣೆಯಲ್ಲಿ ಕೇರಳದಲ್ಲಿ ಮಾತ್ರವೇ ಅಲ್ಲದೆ, ಆಂಧ್ರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಕಮ್ಯೂನಿಸ್ಟ್ ಪಕ್ಷವು ಅಧಿಕಾರಕ್ಕೆ ಬರುವುದೆಂದು ಹೇಳಿದ್ದಾರೆ. ಇದು ಕಮ್ಯೂನಿಸ್ಟ್‌ಪಕ್ಷದ ಬೆಳೆಯುತ್ತಿರುವ ಪ್ರಭಾವಕ್ಕೆ ಚಿಹ್ನೆಯಾಗಿದೆ.

ಪ್ರಜಾಪ್ರಭುತ್ವ ಆಡಳಿತೆ ಯಶಸ್ವಿಯಾಗಲಿ

ಎಷ್ಟೇ ಬಗೆಯ ಅಪಪ್ರಚಾರಗಳು, ಸುಳ್ಳು ಆರೋಪಗಳು ಇದ್ದರೂ ಸಹ ಕೇರಳ ಸರಕಾರ ಎದೆಗುಂದದೆ ದಕ್ಷತೆಯಿಂದ ಆಡಳಿತೆ ನಿರ್ವಹಿಸುತ್ತಿದೆ. ಪ್ರಜಾಪ್ರಭುತ್ವ ತತ್ವಗಳನ್ನು ಅಕ್ಷರಶಃ ಪಾಲಿಸುತ್ತಿದೆ. ಕೇಂದ್ರ ಸರಕಾರದ ನೀತಿಗಳೊಂದಿಗೆ ಭಿನ್ನಾಭಿಪ್ರಾಯವಿದ್ದರೂ ಮಧುರ ಬಾಂಧವ್ಯವನ್ನು ಹೊಂದಿದೆ ಕೇರಳ ಸರಕಾರ. ಮುಂದಿನ ವರ್ಷಗಳಲ್ಲಿ ಕೇರಳ ಜನತೆಯ ಏಳಿಗೆಗಾಗಿ ಶ್ರಮಿಸುತ್ತಿರುವ ಸರಕಾರದ ಕ್ರಮಗಳು ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ. ಅಪಪ್ರಚಾರದಲ್ಲಿ ತೊಡಗಿರುವ ಕಾಂಗ್ರೆಸ್, ಪಿ.ಎಸ್.ಪಿ., ಮುಸ್ಲಿಂ ಲೀಗಿನ ನೀತಿಯನ್ನು ತೀವ್ರವಾಗಿ ಖಂಡಿಸುವುದು ಅಗತ್ಯವಾಗಿದೆ. ಈ ಜನವಿರೋಧಿ ನೀತಿಯನ್ನು ಕೈಬಿಟ್ಟು ಮುಂದಿನ ವರ್ಷದಲ್ಲಿ ಈ ವಿರೋಧ ಪಕ್ಷಗಳು ರಚನಾತ್ಮಕ ಟೀಕೆಯನ್ನು ಮಾಡಲಿ ಎಂದು ಒತ್ತಾಯಪಡಿಸುತ್ತೇವೆ.

ಕೇರಳದ ಬಗ್ಗೆ ನಿಜಲಿಂಗಪ್ಪನವರ ಸುಳ್ಳುಪ್ರಲಾಪ

'ತನ್ನ ಎಲೆ ಮೇಲೆ ಕತ್ತೆ ಬಿದ್ದಿದ್ದರೂ ಇನ್ನೊಬ್ಬರ ಎಲೆಯ ಮೇಲಿರುವ ನೊಣ ತೋರಿಸಿದರು, ಎನ್ನುವ ನಾಣ್ಣುಡಿಯಂತೆ ಮೈಸೂರಿನ ಮಾನ್ಯ ಮುಖ್ಯಮಂತ್ರಿ ನಿಜಲಿಂಗಪ್ಪನವರು ಮಾತನಾಡಿದ್ದಾರೆ. ಕಳೆದವಾರ ಕೇರಳದಲ್ಲಿ ನಡೆದ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿವೇಶನಕ್ಕೆ ಹೋಗಿದ್ದ ನಿಜಲಿಂಗಪ್ಪನವರು ಕೇರಳ ಕಾಂಗ್ರೆಸ್ಸಿಗರಿಗೆ ಒಳಜಗಳಗಳಲ್ಲಿ ನಿರತರಾಗಕೂಡದೆಂದೂ, ಐಕ್ಯತೆಯಿಂದಿರಬೇಕೆಂದೂ ಬುದ್ಧಿವಾದ ಹೇಳಿದ್ದಾರೆ. ಅಷ್ಟೇ ಅಲ್ಲ ಕೇರಳದಲ್ಲಿ ಆಂತರಿಕ ಜಗಳದಿಂದಾಗಿ ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದಿದ್ದಾರೆಂದೂ, ಕಾಂಗ್ರೆಸ್ಸಿಗರು ನಿಸ್ವಾರ್ಥದಿಂದ, ಐಕ್ಯತೆಯಿಂದ ಇದ್ದಲ್ಲಿ ಕಮ್ಯೂನಿಸ್ಟರು ಅಧಿಕಾರಕ್ಕೆ ಬರಲಾಗದೆಂದೂ ತಿಳಿಸಿದ್ದಾರೆ. ಕಮ್ಯೂನಿಸ್ಟರು ಕೇರಳದಲ್ಲಿ ಆಡಳಿತೆಯಲ್ಲಿರುವುದು ದೇಶದಲ್ಲಿ ಪ್ರಜಾಪ್ರಭುತ್ವಕ್ಕೇ ಆತಂಕವಾಗಿದೆಯೆಂದೂ, ಕಮ್ಯೂನಿಸ್ಟರು ಹೇಳುತ್ತಿರುವಂತೆ ಮುಂದಿನ ಚುನಾವಣೆಗಳಲ್ಲಿ ಮೂರು ರಾಜ್ಯಗಳಲ್ಲಿ ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದರೆ ದೇಶದಲ್ಲಿ ಪ್ರಜಾಪ್ರಭುತ್ವವು ಇಲ್ಲದಂತಾಗುವುದೆಂದೂ ತಿಳಿಸಿದ್ದಾರೆ. ಕಮ್ಯೂನಿಸ್ಟ್ ಪಕ್ಷವನ್ನು ಇಲ್ಲಸಲ್ಲದ ಆರೋಪಣೆಗಳಿಂದ ದೂಷಿಸಿ, ಕಾಂಗ್ರೆಸ್ಸಿನಲ್ಲಿ ಐಕ್ಯಮತ್ಯ ಮೂಡಬೇಕೆಂದು ಹಿತೋಪದೇಶ ನುಡಿದಿದ್ದಾರೆ.

ತಮ್ಮ ನಾಯಕತ್ವವೇ ಸಡಿಲಗೊಂಡು ಮಂತ್ರಿಮಂಡಲವಿರುವ ಸ್ಥಿತಿಯಲ್ಲಿದ್ದು ಮೈಸೂರಿನ ಕಾಂಗ್ರೆಸ್ ವ್ಯವಹಾರಗಳು ಒಳಜಗಳ ಸ್ವಾರ್ಥತೆಯಿಂದ ತುಂಬಿ ತುಳುಕುತ್ತಿರುವಾಗ ಮುಖ್ಯಮಂತ್ರಿ ಶ್ರೀ. ನಿಜಲಿಂಗಪ್ಪನವರು ಉಪದೇಶ ಮಾಡಿರುವುದು ಹಾಸ್ಯಾಸ್ಪದವಾಗಿದೆ. ಕಮ್ಯೂನಿಸ್ಟ್ ಪಕ್ಷವನ್ನು ಕಮ್ಯೂನಿಸ್ಟ್ ಸರಕಾರದ ಆಡಳಿತೆಯನ್ನು ಟೀಕೆ ಮಾಡಲು ಹೊರಟಿದ್ದು ನಿಜಲಿಂಗಪ್ಪನವರ ಉದ್ಧಟತನವನ್ನು ತೋರಿಸುತ್ತದೆ. ಇಂಥ ಉದ್ಧಟತನಕ್ಕೆ ಹೋಗದೆ ನಿಜಲಿಂಗಪ್ಪನವರು ತಮ್ಮ ಮನೆ ನೆಟ್ಟಗಿಟ್ಟುಕೊಳ್ಳುವುದರಲ್ಲಿ ತೊಡಗುವರೇ?

ಅಂತರರಾಷ್ಟ್ರೀಯ

ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗ ನಿಲ್ಲಿಸಲು ರಷ್ಯದ ನಿರ್ಧಾರ

ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗವನ್ನು ಏಕಪಕ್ಷೀಯವಾಗಿ ನಿಲ್ಲಿಸಲು ಸೋವಿಯತ್ ಯೂನಿಯನ್ ನಿರ್ಧರಿಸಿದೆ. ಸುಪ್ರೀಂ ಸೋವಿಯತ್ ಜಂಟಿ ಸಭೆಯಲ್ಲಿ ವಿದೇಶಾಂಗ ಸಚಿವ ಗ್ರೋಮಿಕೋರವರು ಮಾರ್ಚ್ 31ರಂದು ಇದರ ಬಗ್ಗೆ ಘೋಷಿಸಿದ್ದಾರೆ.

ರಷ್ಯದ ಕ್ರಮವನ್ನು ಅನುಸರಿಸಿ ಅಮೆರಿಕ ಬ್ರಿಟನುಗಳು ಸಹ ನ್ಯೂಕ್ಲಿಯರ್ ಪ್ರಯೋಗ ಸ್ಫೋಟನೆಗಳನ್ನು ನಿಲ್ಲಿಸುವುದೆಂಬ ಭರವಸೆಯನ್ನು ವ್ಯಕ್ತಗೊಳಿಸಿ, ಈ ದಿಶೆಯಲ್ಲಿ ಪ್ರಥಮ ಹೆಜ್ಜೆಯಾಗಿ ಏಕಪಕ್ಷೀಯವಾಗಿ ನ್ಯೂಕ್ಲಿಯರ್ ಪ್ರಯೋಗ ಸ್ಫೋಟನೆಗಳನ್ನು ನಿಲ್ಲಿಸಲು ರಷ್ಯದ ಸರಕಾರವು ಯೋಜಿಸಿದೆ ಎಂದು ತಿಳಿಸಿದ್ದಾರೆ.

ವಿದೇಶಾಂಗ ಸಚಿವ ಗ್ರೋಮಿಕೋರವರು ಮಾತನಾಡುತ್ತ "ನ್ಯೂಕ್ಲಿಯರ್ ಪ್ರಯೋಗ ಸ್ಫೋಟನೆಗಳು ನಿಂತ ಮಾತ್ರಕ್ಕೇ ಅಣು ಯುದ್ಧ ಭೀತಿ ಪೂರ್ಣವಾಗಿ ತಪ್ಪುವುದಿಲ್ಲವೆಂಬ ಅಂಶ ರಷ್ಯಕ್ಕೆ ಗೊತ್ತಿದೆ. ನ್ಯೂಕ್ಲಿಯರ್ ಪ್ರಯೋಗ ಸ್ಫೋಟನೆಗಳನ್ನು ನಿಲ್ಲಿಸುವುದರ ಜತೆಗೆ ಎಲ್ಲ ವಿಧವಾದ ಅಣು ಮತ್ತು ಜಲಜನಕದ ಅಸ್ತ್ರಗಳ ಬೇಷರತ್ ನಿಷೇಧ ಮತ್ತು ಸೂಕ್ತ ನಿಯಂತ್ರಣದೊಂದಿಗೆ ಈಗ ಇರುವ ನ್ಯೂಕ್ಲಿಯರ್ ಅಸ್ತ್ರಗಳ ದಾಸ್ತಾನಿನ ನಾಶಕ್ಕಾಗಿ ನ್ಯೂಕ್ಲಿಯರ್ ಅಸ್ತ್ರಗಳನ್ನು ಹೊಂದಿರುವ ಇತರ ರಾಷ್ಟ್ರಗಳೊಂದಿಗೆ ಒಪ್ಪಂದಕ್ಕೆ ಬರುವುದು ನಮ್ಮ ಗುರಿಯೆಂದು ಸ್ಪಷ್ಟವಾಗಿ ಇದರೊಂದಿಗೆ ನಾವು ಘೋಷಿಸುತ್ತೇವೆ........ ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗ ಸ್ಫೋಟನೆಗಳ ನಿಲುಗಡೆ ಮತ್ತು ನಿಷೇಧಗಳ ಬಗ್ಗೆ ರಷ್ಯ, ಅಮೆರಿಕ ಮತ್ತು ಬ್ರಿಟನ್‌ಗಳು ಒಪ್ಪಂದಕ್ಕೆ ಬರುವುದಾದರೆ ಮಾನವ ಲೋಕವು ಅಂತಹ ಒಪ್ಪಂದವನ್ನು ಕೃತಜ್ಞತೆಯಿಂದ ಸ್ವಾಗತಿಸುವುದಾದರೂ, ಅಮೆರಿಕ ಮತ್ತು ಬ್ರಿಟನ್‌ಗಳು ಒಪ್ಪಂದಕ್ಕೆ ಬರಲು ತಾವು ಸಿದ್ಧವಾಗಿರುವ ಸೂಚನೆಯೇನನ್ನೂ ನೀಡಿಲ್ಲ" ಎಂದು ತಿಳಿಸಿದ್ದಾರೆ.

ಎಲ್ಲ ವಿಧವಾದ ನ್ಯೂಕ್ಲಿಯರ್ ಅಸ್ತ್ರಗಳ ಉತ್ಪಾದನೆಯನ್ನೂ ಏಕಪಕ್ಷೀಯವಾಗಿ ನಿಲ್ಲಿಸಲು ರಷ್ಯ ಇಚ್ಛಿಸಿದೆ ಎಂದು ಗ್ರೋಮಿಕೊ ತಿಳಿಸಿದ್ದಾರೆ.

ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ನಿಷೇಧದ ಹಾದಿಯಲ್ಲಿ ರಷ್ಯ ಕೈಗೊಂಡಿರುವ ಪ್ರಯೋಗ ಸ್ಫೋಟನೆಗಳ ತಡೆ ಕ್ರಮಕ್ಕೆ ಅಮೇರಿಕ, ಬ್ರಿಟನ್‌ಗಳು ಮಾನ್ಯತೆ ನೀಡದೆ ಆ ಸ್ಫೋಟನೆಗಳನ್ನು ಮುಂದುವರಿಸಿದರೆ ರಷ್ಯವು ತನ್ನ ರಕ್ಷಣಾ ದೃಷ್ಟಿಯಿಂದ ನ್ಯೂಕ್ಲಿಯರ್ ಪ್ರಯೋಗಗಳನ್ನು ನಡೆಸಲು ಕ್ರಮ ತೆಗೆದುಕೊಳ್ಳಬೇಕಾಗಬಹುದೆಂದೂ ಎಚ್ಚರಿಕೆಯನ್ನು ಗ್ರೋಮಿಕೋ ವ್ಯಕ್ತಗೊಳಿಸಿದ್ದಾರೆ. ನ್ಯೂಕ್ಲಿಯರ್ ಅಸ್ತ್ರಗಳನ್ನು ಪಡೆದಿರುವ ರಾಷ್ಟ್ರಗಳ ಪೈಕಿ ಪ್ರಯೋಗ ಸ್ಫೋಟನೆಗಳ ತಡೆ ಒಪ್ಪಂದಕ್ಕೆ ಸಹಿ ಮಾಡಲು ರಷ್ಯವು ಸದಾ ಸಿದ್ಧವಿದೆಯೆಂದೂ ಆದರೆ ಇತರರು ತಯಾರಿಲ್ಲದಿರುವುದು ದುರದೃಷ್ಟಕರವೆಂದೂ ತಿಳಿಸಿದ್ದಾರೆ.

ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗವನ್ನು ನಿಲ್ಲಿಸುವುದರ ಬಗ್ಗೆ ರಷ್ಯದ ಈ ನಿರ್ಧಾರವು ಶಾಂತಿ ಸಾಧನೆಗೆ, ನಿಶ್ಶಸ್ತ್ರೀಕರಣಕ್ಕೆ ದೊಡ್ಡ ಕಾಣಿಕೆಯನ್ನಿತ್ತಿದೆ. ಪಶ್ಚಿಮ ರಾಷ್ಟ್ರಗಳು ಅಣುಶಸ್ತ್ರಗಳ ಪ್ರಯೋಗವನ್ನು ನಿಲ್ಲಿಸುವ ಬಗ್ಗೆ ಒಪ್ಪಂದಕ್ಕೆ ಬಾರದಿದ್ದರೂ ರಷ್ಯವು ಏಕಪಕ್ಷೀಯವಾಗಿ ಪ್ರಯೋಗವನ್ನು ನಿಲ್ಲಿಸುವ ನಿರ್ಧಾರವನ್ನು ಘೋಷಿಸಬೇಕೆಂದು ಸಲಹೆಗಳು ಮಾಡಲಾಗಿದ್ದಿತು. ರಷ್ಯವು ಈ ನಿರ್ಧಾರವನ್ನು ಕೈಗೊಳ್ಳುವುದಕ್ಕೆ ರಕ್ಷಣೆಯ ದೃಷ್ಟಿಯೊಂದೇ ಅಡ್ಡಿ ಇದ್ದುದರಿಂದ ಅದು ಸಾಧ್ಯವಾಗುವುದಿಲ್ಲವೆಂದು, ಸೋವಿಯತ್ ಸರಕಾರದ ನಾಯಕರುಗಳು ಹಿಂದೆ ಘೋಷಿಸಿದ್ದರು. ಆದರೆ ಇಂದು ಆ ನಿರ್ಧಾರವವನ್ನು ಏಕಪಕ್ಷೀಯವಾಗಿಯೇ ತೆಗೆದುಕೊಂಡಿರುವುದು ಸ್ವಾಗತಾರ್ಹವಾಗಿದೆ. ವಿಶ್ವದ ಶಾಂತಿಪ್ರಿಯ ಜನತೆಯೆಲ್ಲವೂ ರಷ್ಯದ ಈ ನಿರ್ಧಾರವನ್ನು ಸ್ವಾಗತಿಸುತ್ತಾರೆ.

ಶಾಂತಿ ಸಾಧನೆಗಾಗಿ, ನಿಶ್ಶಸ್ತ್ರೀಕರಣಕ್ಕಾಗಿ, ಅಣುಶಸ್ತ್ರಾಸ್ತ್ರಗಳ ನಿಷೇಧಕ್ಕಾಗಿ ಸೋವಿಯತ್ ಯೂನಿಯನ್ ತೀವ್ರವಾದ ಪ್ರಯತ್ನವನ್ನು ಮಾಡುತ್ತಿರುವುದು ಎಲ್ಲರಿಗೂ ತಿಳಿದಿದೆ. ಪಶ್ಚಿಮ ರಾಷ್ಟ್ರಗಳು ಮುಂಡಿಸಿದ್ದ ಅನೇಕ ಸಲಹೆಗಳನ್ನು ರಷ್ಯವು ಮೊದಲು ತಿರಸ್ಕರಿಸಿದ್ದರೂ, ನಂತರದಲ್ಲಿ ಒಂದು ಹೆಜ್ಜೆ ಮುಂದೆ ಬಂದು ಅವನ್ನೊಪ್ಪಿದೆ. ಪಶ್ಚಿಮ ರಾಷ್ಟ್ರಗಳೊಂದಿಗೆ ಒಂದು ಒಡಂಬಡಿಕೆಗೆ ಬರಲು ರಷ್ಯವು ಬಹುದೂರ ಮುಂದೆ ಹೋಗಿದೆ. ಆದರೆ ಅಮೇರಿಕನ್ ಸಾಮ್ರಾಜ್ಯವಾದಿಗಳ ನೇತೃತ್ವದಲ್ಲಿರುವ ಪಶ್ಚಿಮ ರಾಷ್ಟ್ರಗಳು ರಷ್ಯದ ಎಲ್ಲ ಶಾಂತಿ ಸಲಹೆಗಳನ್ನು ತಿರಸ್ಕರಿಸುತ್ತಲೇ ಬಂದಿರುವುದಲ್ಲದೆ, ತಾವು ಹಿಂದೆ ಮುಂಡಿಸಿದ್ದ ಸಲಹೆಗಳನ್ನೇ ಕೈಬಿಟ್ಟಿದ್ದಾರೆ.

ಪಶ್ಚಿಮ ರಾಷ್ಟ್ರಗಳು ಎಷ್ಟೇ ಅಡ್ಡಿ ಆತಂಕಗಳನ್ನು ತಂದೊಡ್ಡಿದ್ದರೂ ಸೋವಿಯತ್ ಯೂನಿಯನ್ ತನ್ನ ಶಾಂತಿ ಪ್ರತಿಪಾದಕ ನೀತಿಯನ್ನು ಕೈಬಿಟ್ಟಿಲ್ಲವೆಂಬುದು ನ್ಯೂಕ್ಲಿಯರ್ ಶಸ್ತ್ರಗಳ ಪ್ರಯೋಗವನ್ನು ಏಕಪಕ್ಷೀಯವಾಗಿ ನಿಲ್ಲಿಸಲು ನಿರ್ಧರಿಸಿರುವುದರಿಂದ ಗೊತ್ತಾಗುತ್ತದೆ.

ಪಶ್ಚಿಮ ರಾಷ್ಟ್ರಗಳು ಕೂಡಲೇ ತಾವೂ ನ್ಯೂಕ್ಲಿಯರ್ ಶಸ್ತ್ರಗಳ ಪ್ರಯೋಗವನ್ನು ನಿಲ್ಲಿಸಲು ನಿರ್ಧರಿಸುವುದಾಗಿ ಘೋಷಿಸಿದಲ್ಲಿ ಅಣುಶಸ್ತ್ರಗಳ ಭೀತಿಯಿಂದ ಕೂಡಿರುವ ವಿಶ್ವದ ಜನಕೋಟಿಗೆ ಬಿಡುಗಡೆ ಎನಿಸುತ್ತದೆ. ಇದಕ್ಕಾಗಿ ವಿಶ್ವದ ಶಾಂತಿ ಶಕ್ತಿಗಳು ಒತ್ತಾಯ ತರಬೇಕಾಗಿದೆ.

ಸೋವಿಯತ್ ಯೂನಿಯನ್‌ನ ಈ ಕ್ರಮವನ್ನು ಈಗಾಗಲೇ ಅನೇಕ ರಾಷ್ಟ್ರಗಳು ಶಾಂತಿ ಸಾಧನೆಯ ಹೆಜ್ಜೆಯಲ್ಲಿ ಪ್ರಮುಖವಾದ ತೀರ್ಮಾನವೆಂದು ಕೊಂಡಾಡಿವೆ. ಭಾರತ, ಜಪಾನ್‌ಗಳು ಸೋವಿಯತ್ ಯೂನಿಯನ್‌ನ ಈ ಕ್ರಮವನ್ನು ಕೊಂಡಾಡಿವೆ. ಪಶ್ಚಿಮ ಜರ್ಮನಿಯ ಡೆಮಾಕ್ರಟಿಕ್ ಪಕ್ಷವು ಇದು ನಿಶ್ಶಸ್ತ್ರೀಕರಣ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಸಹಾಯಕವಾಗುವುದೆಂದು ತಿಳಿಸಿದೆ. ಆದರೆ ಅಮೇರಿಕದ ವಿದೇಶಾಂಗ ಸಚಿವ ಡಾಲೆಸ್ ಎಂದಿನಂತೆ ಸೋವಿಯತ್ ಯೂನಿಯನ್‌ನ ಈ ಘೋಷಣೆಯನ್ನು ಶಂಕೆಯಿಂದ ನೋಡಿದೆ. ರಷ್ಯಾದಲ್ಲಿ ನ್ಯೂಕ್ಲಿಯರ್ ಅಸ್ತ್ರಗಳ ಪ್ರಯೋಗವನ್ನು ನಿಲ್ಲಿಸುವುದರ ಬಗ್ಗೆ ತನಿಖೆ ನಡೆಸಲು ಯಾವ ಏರ್ಪಾಡು ಇಲ್ಲದಿರುವುದರಿಂದ ನಂಬಲು ಸಾಧ್ಯವಿಲ್ಲವೆಂಬ ಪ್ರತಿಕ್ರಿಯೆಯನ್ನು ಅಮೇರಿಕದ ವಕ್ತಾರರು ವ್ಯಕ್ತಗೊಳಿಸಿದ್ದಾರೆ. ಪ್ರತಿಕ್ರಿಯೆ ಏನೇ ಇದ್ದರೂ, ಪಶ್ಚಿಮ ರಾಷ್ಟ್ರಗಳು ನೈತಿಕವಾಗಿ ಶಾಂತಿ ಸಾಧನೆಯ ಪ್ರಶ್ನೆಯಲ್ಲಿ ಹಿಂದುಳಿದಿವೆ ಎಂಬುದು ಸ್ಪಷ್ಟವಾಗಿದೆ.

ಸೋವಿಯತ್ ಮಂತ್ರಿಮಂಡಲದಲ್ಲಿ ಬದಲಾವಣೆ

ನಿಕಿಟ ಕೃಷ್ಚೇವ್ ಪ್ರಧಾನ ಮಂತ್ರಿ

ಸೋವಿಯತ್ ಮಂತ್ರಿಮಂಡಲದಲ್ಲಿ ಈ ಬಾರಿಯ ಸುಪ್ರೀಂ ಸೋವಿಯತ್ ಅಧಿವೇಶನದಲ್ಲಿ ಬದಲಾವಣೆಯಾಗಿದೆ. ಮಾರ್ಷಲ್ ಬುಲ್ಗಾನಿನ್‌ರವರು ಪ್ರಧಾನಿ ಪದವಿಯಿಂದ ನಿವೃತ್ತರಾಗಿ ಅವರ ಸ್ಥಾನಕ್ಕೆ ಶ್ರೀ ನಿಕಿಟಾ ಕೃಷ್ಚೋವ್‌ರವರು ನೂತನ ಪ್ರಧಾನಿಯಾಗಿ ನೇಮಿಸಲ್ಪಟ್ಟಿದ್ದಾರೆ. ಪ್ರಧಾನಿ ಬುಲ್ಗಾನಿನ್‌ರವರು ಸ್ಟೇಟ್ ಬ್ಯಾಂಕಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ.

ಮಂತ್ರಿಮಂಡಲದಲ್ಲಿ ಬದಲಾವಣೆಯಾದರೂ ಸೋವಿಯತ್ ಯೂನಿಯನ್ನಿನ ಅಂತರರಾಷ್ಟ್ರೀಯ ಅಥವಾ ರಾಷ್ಟ್ರೀಯ ನೀತಿಯಲ್ಲಿ ಬದಲಾವಣೆ ಏನೂ ಇಲ್ಲವೆಂದು ಹೇಳಲಾಗಿದೆ. ಶ್ರೀ ಕೃಷ್ಚೋವ್‌ರವರ ನೂತನ ಸಂಪುಟದಲ್ಲಿ ಹೆಚ್ಚಿನ ಬದಲಾವಣೆ ಏನೂ ಇಲ್ಲ. ಶ್ರೀ ಅನಸ್ತಾನ್ ಮಿಕೊಯನ್ ಮತ್ತು ಫ್ರಾಲ ಆರ್. ಕೋಸ್ಲೋವ್‌ರವರು ಪ್ರಥಮ ಉಪ ಪ್ರಧಾನಿಗಳಾಗಿ ನೇಮಕಗೊಂಡಿದ್ದಾರೆ. ಶ್ರೀ ಆಂದ್ರಿಗ್ರೋಮಿಕೋರವರು ವಿದೇಶಾಂಗ ಸಚಿವರಾಗಿ ಮುಂದುವರಿದಿರುತ್ತಾರೆ.

★ ರಷ್ಯದ ನೂತನ ಪ್ರಧಾನಿ ನಿಕಿಟಾ ಕೃಷ್ಚೇವ್ ★



ರಾಷ್ಟ್ರೀಯ

ಪಶ್ಚಿಮ ಬಂಗಾಳ ಶಾಸನ ಸಭೆಯಲ್ಲಿ ಗೊಂದಲ

ಪಶ್ಚಿಮ ಬಂಗಾಳ ಶಾಸನ ಸಭೆಯಲ್ಲಿ ತೀವ್ರವಾದ ಗೊಂದಲವೇರ್ಪಟ್ಟು ಸಭಾಧ್ಯಕ್ಷರು ಸಭೆಯ ಕಾರ್ಯಕಲಾಪಗಳನ್ನು ದೀರ್ಘಕಾಲ ಮುಂದುವರಿಸಿದ್ದಾರೆ. ವಿರೋಧ ಪಕ್ಷದ ಸದಸ್ಯರುಗಳು ಮತ್ತು ಕಾಂಗ್ರೆಸ್ ಶಾಸನ ಸಭಾ ಸದಸ್ಯರುಗಳ ನಡುವೆ ತೀವ್ರವಾದ ವಾಗ್ವಾದ ಆರಂಭವಾಗಿ ಸಭೆಯ ಕಾರ್ಯಕಲಾಪಕ್ಕೆ ಅಡ್ಡಿಯಾದ ಕಾರಣದಿಂದ ಸಭೆಯನ್ನು ಮುಂದುವರಿಸಲಾಗಿದೆ ಎಂದು ಅಧ್ಯಕ್ಷರು ತಿಳಿಸಿದ್ದಾರೆ.

ಮಾಜಿ ಸಚಿವ ಸಿದ್ಧಾರ್ಥ ರೇಯವರು ಪಶ್ಚಿಮ ಬಂಗಾಳದ ಬಿ. ಸಿ. ರಾಯ್ ಸರಕಾರದ ಮೇಲೆ ಹೊರಿಸಿದ್ದ ಆಪಾದನೆಗಳಿಗೆ ಉತ್ತರ ಕೊಡಲು ಮುಖ್ಯ ಮಂತ್ರಿ ಬಿ. ಸಿ ರಾಯ್ ಆರಂಭಿಸಿದಾಗ ಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಪ್ರಶ್ನೆಗಳ ಸುರಿಮಳೆಯನ್ನೇ ಕರೆದಿದ್ದರಿಂದ ಮುಖ್ಯ

(೬ನೇ ಪುಟದಿಂದ)

"ನನ್ನ ಕ್ರಾಂತಿಕಾರೀ ದೀಕ್ಷೆ"

ಇ. ಎಮ್. ಎಸ್.

"ಎಚ್ಚರಿಕೆ! ನೀವು ಆತನಿಗೆ ಓಟು ಕೊಡಬೇಡಿ. ಆತ ದೇಶವನ್ನು ಬೋಲ್ಶೇವಿಕ್ ಮಾಡಿ ಬಿಟ್ಟಾನು" ನಾನು ಮುವತ್ತೈದು ವರುಷಗಳ ಹಿಂದೆ ಈ ಮಾತುಗಳನ್ನುಕೇಳಿದ್ದರೂ, ಇಂದೂ ನನಗೆ ನೆನಪಿದೆ.

ಅವರು ಹೇಳಿದ್ದು, ಮದರಾಸು ಕೌನ್ಸಿಲಿನ ಚುನಾವಣೆಯ ಕಾಲದಲ್ಲಿ, ನಮ್ಮ ಮನೆಗೆ ಓಟು ಕೇಳಲು ಬಂದಾಗ. ದಿವಂಗತ ಎಮ್. ಕೃಷ್ಣನ್‌ನಾಯರ್ ಬಗ್ಗೆ ಈ ಮಾತುಗಳನ್ನು ಹೇಳಿದ್ದರು. ಆಗ ಕೃಷ್ಣನ್‌ನಾಯರ್ ಮಲಬಾರಿನ ರೈತರ ಚಳುವಳಿಯ ಮಹಾ ನಾಯಕರಾಗಿದ್ದರು.

ಕೃಷ್ಣನ್‌ನಾಯರ್ ರೈತರ ನಾಯಕರಾಗಿರಲಿಲ್ಲ. ಅವರು ಕೇರಳದಲ್ಲಿ ಕಾಣಮಾದಾರರೆಂದು ಕರೆಯಲ್ಪಡುತ್ತಿದ್ದವರ ನಾಯಕರಾಗಿದ್ದರು. ಈ ಕಾಣಮದಾರರು ಜಮೀನ್ದಾರರಿಂದ ಗೇಣಿಗೆ ಪಡೆದ ಭೂಮಿಯನ್ನು ;ತಾವು ಸ್ವತಃ ಬೆಳೆಸದೆ ವರುಮ ಪಟ್ಟಮದಾರರೆಂಬ ರೈತರಿಗೆ ಬಾಡಿಗೆಗೆ ನೀಡುತ್ತಿದ್ದರು.

ಜಮೀನ್ದಾರರ ಪ್ರತಿನಿಧಿಗಳು ಇಂಥ ರೈತರ ನಾಯಕನನ್ನು ಬೋಲ್ಶೆವಿಕ್ ಅಂದಾಗಲೇ, ಬೋಲ್ಶೆವಿಜಂ ಬಗ್ಗೆ ಈ ಜನರ ಅಭಿಪ್ರಾಯ ಏನೆಂದು ಸ್ಪಷ್ಟವಾಗುತ್ತಿತ್ತು. ನನ್ನ ಬಾಲ್ಯದಲ್ಲಿ ಇದರ ಅರಿವೂ ನನಗಿತ್ತು. ಅಂದು ಸಮಾಜ ವ್ಯವಸ್ಥೆಯಲ್ಲಿ ತಿಲಮಾತ್ರವಾದರೂ ಪರಿವರ್ತನೆಯಾಗುವುದನ್ನು ಜಮೀನ್ದಾರರ ಭಂಟರು ಬೋಲ್ಶೆವಿಜಂ ಎಂದೇ ಕರೆಯುತ್ತಿದ್ದುದು ಸಾಮಾನ್ಯವಾಗಿತ್ತು. ಬೋಲ್ಶೆವಿಜಂ ಅನ್ನು ಭಯಂಕರ ಗುಮ್ಮನಿಗೆ ಹೋಲಿಸಿ ಜನರನ್ನು ಹೆದರಿಸುತ್ತಿದ್ದರು.

ಮುಂದೆ ಕೆಲವು ವರುಷಗಳ ನಂತರ ನನ್ನ ವಿಚಾರದಲ್ಲಿ ಪರಿವರ್ತನೆಯಾಯಿತು. ರಷ್ಯಾದ ಬೋಲ್ಶೆವಿಜಂ ಬಗ್ಗೆ ಪ್ರಚಾರದಲ್ಲಿರುವಂಥ ವಿಚಾರಗಳೆಲ್ಲಾ ಕಪೋಲ ಕಲ್ಪಿತವೆಂದೂ, ಅದು ಕೆಲವು ಸ್ವಾರ್ಥಿಗಳ ಮೂಲಕ ತಮ್ಮ ಸ್ವಾರ್ಥ ಸಾಧನೆಗಾಗಿ ರಚಿಸಿದ ತಂತ್ರವೆಂದೂ ಅರಿವಾಯಿತು. ಈ ವಿಚಾರ ಪ್ರಥಮ ಬಾರಿ ನಾನು ತಿಳಿದಿದ್ದು ನಮ್ಮ ಇಂದಿನ ಪ್ರಧಾನ ಮಂತ್ರಿ ನೆಹರೂರವರಿಂದ. 1927-28 ರಲ್ಲಿ ಅವರು ಸೋವಿಯತ್ ಯೂನಿಯನನ್ನೂ ಸೇರಿಸಿ, ಇಡೀ ಯೂರೋಪಿನ ಪ್ರವಾಸ ಮಾಡಿ ಬಂದಿದ್ದರು. ಪತ್ರಿಕೆಗಳಲ್ಲಿ ಅವರು ಬರೆದಿದ್ದ ಲೇಖನಗಳು "ಸೋವಿಯತ್ ರಷ್ಯಾ" ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ಪ್ರಕಾಶಿತವಾಗಿತ್ತು. ಆ ಪುಸ್ತಕದಲ್ಲಿ; "ಜಗತ್ತಿನ ಆರನೇ ಒಂದು ಭಾಗದಲ್ಲಿ ನಿರ್ಮಾಣವಾಗುತ್ತಿರುವ ಹೊಸ ಸಮಾಜವಾದೀ ವ್ಯವಸ್ಥೆಯ ಬಗ್ಗೆ ಅಪಪ್ರಚಾರ ಮಾಡುತ್ತಿರುವವರು, ಆ ಪದ್ಧತಿಯ ಬಗ್ಗೆ ಸುಳ್ಳಿನ ಕಂತೆಗಳನ್ನು ರಚಿಸುತ್ತಿದ್ದಾರೆ. ಅವರು ಸೋವಿಯತ್ ಯೂನಿಯನ್ನಿನ ಬಗ್ಗೆ ಬೇಕೆಂದೇ ತಪ್ಪಭಿಪ್ರಾಯಗಳನ್ನು ಜನರಲ್ಲಿ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ." ಎಂದು ಓದಿದೆ. ಪತ್ರಿಕೆಗಳು ಪ್ರಕಟಿಸುತ್ತಿದ್ದ ಕಟ್ಟುಕತೆಗಳ ಬಗ್ಗೆ ನೆಹರೂರವರು ಕಟು ಟೀಕೆಯನ್ನು ಮಾಡಿ, ಅವರ ತಂತ್ರಗಳನ್ನು ಬಯಲಿಗೆಳೆದಿದ್ದರು. ಇದರಿಂದ ನನ್ನ ಕಣ್ಣು ತೆರೆಯಿತು.

ಆದರೆ ಪಂ. ನೆಹರೂರ ಲೇಖನಗಳು ಸೋವಿಯತ್ ಯೂನಿಯನಿನಲ್ಲಿ ನಿರ್ಮಾಣವಾಗುತ್ತಿರುವ ಹೊಸ ಸಮಾಜದ ನಿಜವಾದ ಮಹತ್ವವೇನು? ಎಂಬುದರ ಬಗ್ಗೆ ಸರಿಯಾದ ಬೆಳಕನ್ನು ಬೀರಲಿಲ್ಲವೆಂಬುದನ್ನು ನಾನು ಮುಂದೆ ಅರಿತುಕೊಂಡೆ. ಜಗತ್ತಿನ ಅನ್ಯ ಸಾಮ್ರಾಜ್ಯಶಾಹೀ ವಿರೋಧಿ ಶಕ್ತಿಗಳಲ್ಲಿ ಇದೂ ಒಂದೆಂದೇ ನಾನು ನೆಹರೂರವರ ಲೇಖನಗಳಿಂದ ಅರಿತುದ್ದು. ಅದಕ್ಕಿಂತ ಹೆಚ್ಚಿನದ್ದೇನೂ ಇರಲಿಲ್ಲ, ಐರ್ಲೆಂಡಿನ ಸಿನ್‌ಫಿನ್ ಚಳುವಳಿ, ತುರ್ಕಿ ಯುವಜನ ಚಳುವಳಿ, ಚೀನಾ-ಜಾಪಾನುಗಳ ರಾಷ್ಟ್ರವಾದೀ ಚಳುವಳಿ, ಹಾಗೇ ನಮ್ಮ ರಾಷ್ಟ್ರೀಯ ಚಳುವಳಿ ಇವುಗಳೆಲ್ಲವನ್ನೂ ರಷ್ಯಾದ ಬೋಲ್ಶೆವಿಕ್ ಹೋರಾಟದ ಜೊತೆ ಒಂದೇ ಮಟ್ಟದಲ್ಲಿ ಪರಿಗಣಿಸಲಾಗಿತ್ತು. ಕೊನೆಗೆ ಮುಸೋಲಿನಿಯ ಫ್ಯಾಸಿಸ್ಟ್ ಚಳುವಳಿಯನ್ನೂ ಇದರ ಜೊತೆ ಸೇರಿಸಲಾಗಿತ್ತು.

ಸೋವಿಯತ್ ರಷ್ಯಾದ ಕ್ರಾಂತಿ ಜಗತ್ತಿಗೆ ಎಷ್ಟೊಂದು ಮಹತ್ವಪೂರ್ಣವಾದುದು ಎಂಬ ಅರಿವು ಸ್ಪಷ್ಟವಾಗದಿದುದರಿಂದಾಗಿ, ನಾನು ನಮ್ಮ ದೇಶದ ಉಗ್ರ ವಾಮ ಪಕ್ಷೀಯರಾದ ಆತಂಕವಾದಿಗಳಿಗೂ, ಹೊಸದಾಗಿ ನಿರ್ಮಾಣಗೊಳ್ಳುತ್ತಿದ್ದ ಕಮ್ಯೂನಿಸ್ಟ್ ಪಾರ್ಟಿಗೂ ಯಾವ ಬೇಧವನ್ನೂ ಎಣಿಸಲಿಲ್ಲ. ಅವೆರಡೂ ಒಂದೇ ರೀತಿಯವೆಂದು ಪರಿಗಣಿಸಿದೆ. ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ನಡೆದ ಮೀರತ್ ಮತ್ತು ಲಾಹೋರ್ ವಿಚಾರಣೆಗಳಲ್ಲಿ ನನಗೆ ಯಾವ ಬೇಧವೂ ಕಂಡು ಬರಲಿಲ್ಲ.

ಸೋವಿಯತ್ ಯೂನಿಯನ್ನಿನ ಮಹತ್ವ ನನಗೆ ಅರಿವಾದುದು, ಅವರು ಪ್ರಥಮ ಬಾರಿ ತಮ್ಮ ಪಂಚವಾರ್ಷಿಕ ಯೋಜನೆಯನ್ನು ಪೂರೈಸಿದಾಗ. ಅದೇ ಕಾಲಘಟ್ಟದಲ್ಲಿ ಇಡೀ ಜಗತ್ತು 1929-33ರ ಮಹಾ ಆರ್ಥಿಕ ಸಂಕಟದಲ್ಲಿ ತೊಳಲಾಡುತ್ತಿತ್ತು. ಇದರಿಂದಾಗಿ ನಾನು ಯೋಚಿಸಿದೆ; ಬೋಲ್ಶೆವಿಜಂ ಇತರ ಸಾಮ್ರಾಜ್ಯ ವಿರೋಧಿ ರೀತಿಯ ಒಂದು ಚಳುವಳಿಯಷ್ಟೇ ಅಲ್ಲ, ಅದು ಹೊಸ ಸಮಾಜವೊಂದರ ಬುನಾದಿಯ ಸೃಜನಾತ್ಮಕ ಪ್ರಯತ್ನವೂ ಆಗಿದೆ, ಎಂದು.

ಈ ಭಾವನೆಯು ನನ್ನಲ್ಲಿ ಹೊಸ ವಿಚಾರ ಶಕ್ತಿಯನ್ನು ತುಂಬಿತು. ಡಾ॥ವೆಲರ್, ಕಮಾಲ್ ಅತಾತುರ್ಕ್, ಸನ್‌ಯತ್—ಸೇನ್ ಮತ್ತು ಮಹಾತ್ಮ ಗಾಂಧೀ ಮುಂತಾದವರನ್ನು ಲೆನಿನರ ಸರಿಸಮವಾಗಿ ಪರಿಗಣಿಸಲು ಸಾಧ್ಯವಿಲ್ಲವೆಂದು ನನಗೆ ಮನವರಿಕೆಯಾಯಿತು. ಲೆನಿನರ ಹೊರತು-ಉಳಿದವರನ್ನು ಸಾಮ್ರಾಜ್ಯ ವಿರೋಧಿ ಹೋರಾಟಗಳ ಮಹಾ ನಾಯಕರೆಂದು ಗೌರವಿಸಲೇ ಬೇಕು. ಆದರೆ ಲೆನಿನ್ ಮತ್ತು ಅವರ ಅನುಯಾಯಿಗಳು ಜಗದ್ವ್ಯಾಪಿಯಾಗಲಿರುವಂಥ ಒಂದು ಹೊಸ ಸಮಾಜದ ನಿರ್ಮಾಪಕರಾಗಿದ್ದರು ಅದರ ಮುಂಚೂಣಿಯಾಗಿದ್ದರು.

ಈ ಅಭಿಪ್ರಾಯದಿಂದಾಗಿಯೇ ನಾನು ಮೊದಲು ಕಾಂಗ್ರೆಸ್ಸ್ ಸೋಷಲಿಸ್ಟ್ ಪಾರ್ಟಿಯ ವಿಚಾರದಂತೆ ಸಮಾಜವಾದಿಯಾದೆ. ಅನಂತರ ಕಮ್ಯೂನಿಸ್ಟ್ ಪಾರ್ಟಿಯನ್ನು ಸೇರಿದೆ.

ಈ ಬಗ್ಗೆ ನಾನು ಇನ್ನೂ ಒಂದು ಮಾತು ಹೇಳಲಿಚ್ಛಿಸುತ್ತೇನೆ. ರಷ್ಯಾದ ಕ್ರಾಂತಿಯ ಬಗ್ಗೆ ಪ್ರಥಮವಾಗಿ ನನಗೆ ಹೆಚ್ಚಿನ ಜ್ಞಾನವು ತ್ರಾತ್ಸ್ಕಿಯ ಪುಸ್ತಕಗಳಿಂದ ದೊರೆಯಿತೆಂದರೆ ಅತಿಶಯೋಕ್ತಿಯಾಗಲಾರದು. ಆತನ ಪುಸ್ತಕಗಳನ್ನು ಓದಿ ಪ್ರಭಾವಿತನಾದ ನಾನು ಮಲೆಯಾಳಿ ಭಾಷೆಯಲ್ಲಿ "1917" ಎಂಬ ಹೆಸರಿನ ಪುಸ್ತಕವೊಂದನ್ನು ಬರೆದೆ. ತ್ರಾತ್ಸ್ಕಿ ನನ್ನ ಮೇಲೆ ಇಷ್ಟೆಲ್ಲಾ ಪ್ರಭಾವ ಬೀರಿದ್ದರೂ, ರಷ್ಯದ ಕ್ರಾಂತಿಯ ಮೂಲಭೂತ ತತ್ವದ ವಿಷಯದಲ್ಲಿ ಮಾತ್ರ ನನ್ನ ಮೇಲೆ ಪ್ರಭಾವ ಬೀರುವುದರಲ್ಲಿ ಆತ ನಿಷ್ಫಲನಾಗಿದ್ದ. ಮೊದಲು ರಷ್ಯಾದ ಕ್ರಾಂತಿಯ ಬಗ್ಗೆ ನಾನು ತ್ರಾತ್ಸ್ಕಿಯ ಹೊರತು ಅನ್ಯರ ಪುಸ್ತಕಗಳನ್ನು ಓದಿರಲಿಲ್ಲ. ತ್ರಾತ್ಸ್ಕಿಯು ತನ್ನ ಪುಸ್ತಕಗಳಲ್ಲಿ ರಷ್ಯಾದ ಕ್ರಾಂತಿಕಾರೀ ನಾಯಕರ ಬಗ್ಗೆ ಓದುಗರಲ್ಲಿ ಕೀಳುಭಾವನೆ ಹುಟ್ಟಿಸಲು ಪ್ರಯತ್ನಿಸಿದ್ದರೂ, ಅದರ ಪರಿಣಾಮ ನನ್ನ ಮೇಲೆ ಆಗಲೇ ಇಲ್ಲ. ರಷ್ಯಾದ ಕ್ರಾಂತಿಕಾರೀ ನಾಯಕರ ಬಗ್ಗೆ ನನ್ನಲ್ಲಿ ಜಿಗುಪ್ಸೆಯ ಭಾವನೆ ಎಂದೂ ಹುಟ್ಟಲೇ ಇಲ್ಲ.

ರಷ್ಯಾದ ಪ್ರಥಮ ಪಂಚವಾರ್ಷಿಕ ಯೋಜನೆಯಿಂದ ನಾನು ಅಧಿಕ ಆಕರ್ಷಿತನಾಗಿದ್ದೆ. ಯೋಜನೆಯ ಸಫಲತೆಗಾಗಿ ಶ್ರಮಿಸಿದ ಅಲ್ಲಿಯ ಜನತೆ ಮತ್ತು ಅವರಿಗೆ ನಾಯಕತ್ವನೀಡಿದ ಮುಂದಾಳುಗಳ ಬಗ್ಗೆ ನನ್ನ ಹೃದಯದಲ್ಲಿ ತುಂಬಾ ಗೌರವ ಹುಟ್ಟಿಕೊಂಡಿತ್ತು. ಅವರ ವಿರೋಧವಾಗಿ ತ್ರಾತ್ಸ್ಕಿ ಬರೆದ ಮಾತುಗಳು ನನಗೆ ಎಂದೂ ಒಪ್ಪಿಗೆಯಾಗಲೇ ಇಲ್ಲ. ಅದೇ ಸಮಯದಲ್ಲಿ ನನಗೆ ತ್ರಾತ್ಸ್ಕಿ ವಾದವನ್ನು ಸರಿಯಾಗಿ ಅರ್ಥಮಾಡಲು ಸಹಾಯವಾಗುವಂಥ ಇತರ ಸಾಹಿತ್ಯಗಳೂ ದೊರಕಿತುವು.

ಎರಡನೇ ಮಹಾಯುದ್ಧದ ಕಾಲದಲ್ಲಿ ಸೋವಿಯತ್ ಯೂನಿಯನ್ ಸಾಧಿಸಿದ ಸಾಧನೆಗಳು, ಅದು ಮಾನವತೆಯ ಮುಂದೆ ಒಂದು ಉಜ್ವಲ ದೀವಟಿಗೆ ಹಿಡಿದು ಸಾಗುತ್ತಿರುವ ಬಗ್ಗೆ, ಅವುಗಳಿಂದ ನನ್ನ ಮೇಲಾದ ಪರಿಣಾಮಗಳನ್ನು ಇಲ್ಲಿ ಸವಿಸ್ತಾರವಾಗಿ ವಿವರಿಸುವ ಅಗತ್ಯವಿಲ್ಲವೆಂದು ಭಾವಿಸುತ್ತೇನೆ. ಆದರೆ ನನ್ನ ವ್ಯಕ್ತಿಗತ ಸ್ನೇಹಿತರಾಗಿದ್ದವರೊಬ್ಬರು 1945ರಲ್ಲೋ, 1946ರಲ್ಲೋ ಅಂದ ಒಂದು ಮಾತನ್ನು ಮಾತ್ರ ನಾನು ಬರೆಯಲಿಚ್ಛಿಸುತ್ತೇನೆ. ಅವರು ಕಮ್ಯೂನಿಸ್ಟರಾಗಿರಲಿಲ್ಲ. ನೂರಕ್ಕೆ ನೂರುಪಾಲು ಗಾಂಧೀವಾದಿಗಳಾಗಿದ್ದರು.

ಅವರು ಹೀಗೆ ಅಂದಿದ್ದರು:

"ಮೂರು ವಿಷಯಗಳು ನನ್ನ ಹೃದಯದಲ್ಲಿ ಸೋವಿಯತ್ ಯೂನಿಯನಿನ ಬಗ್ಗೆ ಗೌರವವನ್ನು ಹುಟ್ಟಿಸಿವೆ. ಒಂದು ಯುದ್ಧಕ್ಕೆ ಮೊದಲಿನ ಪಂಚ ವಾರ್ಷಿಕ ಯೋಜನೆ. ಎರಡು ಸಿಡ್ನಿವೆಬ್‌ರ ಪುಸ್ತಕ "ಸೋವಿಯತ್ — ಕಮ್ಯೂನಿಸಂ." ಮೂರು ಸ್ಟಾಲಿನ್‌ಗ್ರಾಡ್ ರಕ್ಷಣೆಯ ಕದನ!". ತಮ್ಮ ನಾಲ್ಕನೆಯ ವಿಷಯವಾಗಿ ಯುದ್ಧದ ನಂತರ ಸೋವಿಯತ್ ಯೂನಿಯನ್ ಸಾಧಿಸಿರುವ ಆರ್ಥಿಕ, ವೈಜ್ಞಾನಿಕ ಸಫಲತೆಗಳನ್ನೂ ಇಂದು ಆ ನನ್ನ ಗೆಳೆಯರು ಸೇರಿಸದಿರರೆಂದು ಭಾವಿಸುತ್ತೇನೆ.

ಇಂದು ಕೆಲವರು ಒಂದು ಹೊಸ ಭಾವನೆಯನ್ನು ಕಲ್ಪಿಸಿಕೊಂಡಿದ್ದಾರೆ, ಸೋವಿಯತ್ ಯೂನಿಯನಿನ ಕಮ್ಯೂನಿಸ್ಟ್ ಪಾರ್ಟಿಯ ಇಪ್ಪತ್ತನೆಯ ಮಹಾ ಸಮ್ಮೇಳನದಲ್ಲಿ ಸ್ಟಾಲಿನರ ನಾಯಕತ್ವದಲ್ಲಿ ನಡೆದ ತಪ್ಪುಗಳ ವಿಶ್ಲೇಷಣೆಯಿಂದ ಸೋವಿಯತ್ತಿನ ಬಗ್ಗೆ ನಮ್ಮಲ್ಲಿರುವ ವಿಶ್ವಾಸ ಅಳಿದು ಹೋಗಬಹುದೆಂದು ಅವರು ಭಾವಿಸಿದರೆ. ನಾವು ಕರ್ತವ್ಯ ವಿಮೂಢರಾಗಿ, ನಿರಾಶರಾಗಿ ಇಡೀ ಸೋವಿಯತ್ ವ್ಯವಸ್ಥೆಯನ್ನೇ ವಿರೋಧಿಸಬಹುದೆಂದು ಅವರು ಕನಸು ಕಾಣುತ್ತಿದ್ದರು. ಆದರೆ ಈಗ ಅವರ ಕಣ್ಣು ತೆರೆದಿದೆ.

ಅಂದರೆ ನಿಜಸ್ಥಿತಿ ಅವರ ಕಲ್ಪನೆಗೆ ತೀರಾ ವ್ಯತಿರಿಕ್ತವಾಗಿದೆ. ಇಂದು ಭಾರತದ ಮೊದಲಿಗಿಂತಲೂ ಅಧಿಕ ಜನರ ಹೃದಯದಲ್ಲಿ ಸೋವಿಯತ್ತಿನ ಬಗ್ಗೆ ಹೊಸದಾದ ಗೌರವ ಭಾವನೆ ಜಾಗೃತವಾಗಿದೆ. ಬಂಡವಾಳವಾದೀ ದೇಶಗಳ ಎದುರಿನಲ್ಲಿ, ಸೋವಿಯತ್ ವ್ಯವಸ್ಥೆಯು ಆರ್ಥಿಕ ಹಾಗೂ ಸಾಂಸ್ಕೃತಿಕ ಉನ್ನತಿಯಲ್ಲಿ ಬಂಡವಾಳಶಾಹೀ ವ್ಯವಸ್ಥೆಗಿಂತಲೂ ಮುಂದುವರಿದುದ್ದೇ ಅಲ್ಲದೆ, ತನ್ನ ತಪ್ಪುಗಳನ್ನು ಕಂಡುಹಿಡಿದು, ಅದನ್ನು ತಿದ್ದುವುದರಲ್ಲೂ ಸೋವಿಯತ್ ಯೂನಿಯನ್ ಅಧಿಕ ಧೈರ್ಯಶಾಲಿ ಹಾಗೂ ಕರ್ತವ್ಯ ಪರಾಯಣವಾಗಿದೆ ಎಂದು ಜನರಿಂದು ಚೆನ್ನಾಗಿ ತಿಳಿದಿದ್ದಾರೆ. ಇಪ್ಪತ್ತನೇ ಪಾರ್ಟಿ ಸಮ್ಮೇಳನದಲ್ಲಾದ ಮಹತ್ವಪೂರ್ಣ ವಿಷಯಗಳಿಂದ ಭಾರತೀಯ ಜನತೆ ಇದೇ ಅಭಿಪ್ರಾಯವನ್ನೇ ಕಂಡಿರಬಹುದೆಂದು ನನ್ನ ನಂಬಿಕೆ.

ಅನುವಾದ:
"ಶ್ರಮಜೀವಿ"

ಒಂದು ಕಾಲ್ಪನಿಕ ಪ್ರಹಸನ

ಕೇರಳವೆಂದರೆ ಕಲ್ಪತರು

ಆನಂದನ್

ಸಾಮಾನ್ಯನಾಗಿದ್ದ ರಾಯ, ರಾಜಕೀಯದಲ್ಲಿ ಇಳಿದು, ಹೊಸ ಅವತಾರ ತಾಳಿದಾಗಿನಿಂದ, ಅವನ ತರ್ಕಬುದ್ಧಿಗೆ ತುಕ್ಕು ಹಿಡಿಯಿತು. ಅವಿವೇಕಕ್ಕೆ ಅಧಿಪತಿಯಾಗಲೂ ಬಯಸಿದನು. ಅವನ ರಾಜಕೀಯ ಅವನ ಸ್ವಂತಕ್ಕೆ ಸೇರಿದ್ದಾದರೂ ನ್ಯಾಯ, ಧರ್ಮಗಳಿಗೆ ಯಾರಾದರೇನು ?

ಮೊನ್ನೆಯ ದಿನ, ಸಾಯಂಕಾಲ ಕಾಫಿ ಕುಡಿಯುತ್ತಾ ಕುಳಿತಿದ್ದಾಗ, ಶ್ವೇತಾಂಬರಿಯಾಗಿ ರಾಯ ದಯ ಮಾಡಿಸಿದ. "ಏನಯ್ಯ, ಕೇರಳದವರಂತೆ, ಶ್ವೇತಾಂಬರಿಯಾಗಿದ್ದೀ" ಎಂದೆ.

"ನಾನು ಮಲೆಯಾಳಿಗಳಂತೆ ದಡ್ಡನಲ್ಲ, ನನ್ನಂತವರು ನಾಲ್ಕು-ಜನ ಅಲ್ಲಿದ್ದಿದ್ದರೆ, ಆ ಸರ್ಕಾರವನ್ನು ಇಷ್ಟು ಹೊತ್ತಿಗೆ ಸೋಲಿಸುತ್ತಿದ್ದೆ"-ರಾಯ ತನ್ನ ಕರೀ ಕನ್ನಡಕವನ್ನು ಜೋಬಿನಲ್ಲಿ ಇಡುತ್ತಿದ್ದ.

ಕೇರಳಕ್ಕೇ ಏನು, ಇವನಂತಹ ನಾಲ್ಕು ಜನ, ಸಂದರ್ಭ ಒದಗಿದರೆ ಎಲ್ಲಿಗಾದರೂ ಬೇಕಾಗುತ್ತದೆ, ಇವನು ಹೊರುವುದಕ್ಕೆ ತಕ್ಕವನೇ ಹೊರತು, ರಾಜಕೀಯಕ್ಕಲ್ಲ ಎನ್ನಿಸಿತು. ಆದರೂ ಒಂದಿಷ್ಟು ವಿವೇಕ ಹೇಳೋಣವೆನ್ನಿಸಿತು. ರಾಯನಿಗೂ ಕಾಫಿ ಕೊಟ್ಟು ಉಪಚರಿಸಿದೆ.

ರಾಯನೇ ಕೇಳು. ಕೇರಳದವರು ಹೆಡ್ಡರೆಂದೆಯಲ್ಲ ಅದು ಬಹು ತಪ್ಪಾದ ಮಾತು. ಜಗದ್ವಂದ್ಯ ಶಂಕರಾಚಾರ್ಯರವರು — ಮಲೆಯಾಳದವರು. ಕೇರಳದವರು.

ವರಕವಿಗಳಾದ, ಕುಮಾರನ್ ಆಶಾನ್ ಕುಂಜ್ಯನ್ ನಂಬಿಯಾರ್ ಮತ್ತು ಮಹಾಕವಿ ವಳ್ಳತ್ತೋಳ್ ಇವರೂ ಕೇರಳದವರೆ.

ಗೋಪಿನಾಥ, ತಂಗಮಣಿಯಂತಹ ಅಪರೂಪ ಕಲಾಕೋವಿದರು, ಭಾರತದ ರತ್ನಗಳು, ಇಂದು ಸರ್ಕಾರ, ವಾಣಿಜ್ಯ, ಉದ್ಯಮದಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರತಿಭಾನ್ವಿತರು ಮಲೆಯಾಳಿಗಳಲ್ಲವೆ.

ಪ್ರಾಂತೀಯ ಸಂಕುಚಿತ ಭಾವನೆ, ನಿನ್ನಂತಹ ರಾಜಕೀಯ ದುರಂಧರನಿಗೆ ಭೂಷಣವಲ್ಲ" ಎಂದು ಹೇಳಿದೆ.

ನನ್ನ ಮನಸ್ಸು "ಶಂಕುಮುಖಂ" ಸಮುದ್ರ ತೀರದಲ್ಲಿ, ಭಾರತದ ಪ್ರಮುಖ ಮೃಗಾಲಯವಿರುವ ತಿರುವಾಂಕೂರಿನಲ್ಲಿ, ಅಲ್ಲಿನ ಜನಜೀವನದ ಮಧ್ಯವಿಹರಿಸುತ್ತಿತ್ತು.

"ನಾನು ಹೆಡ್ಡರೆಂದು, ಹೇಳಿದ್ದು, ಆ ಮೇಧಾವಿಗಳನ್ನು ಉದ್ದೇಶಿಸಲ್ಲ. ಓಟು ಕೊಟ್ಟು ನಂಬೂದ್ರಿ ಸರ್ಕಾರವನ್ನು ಪಟ್ಟಕ್ಕೆ ತಂದರಲ್ಲ, ಆ ಮತದಾನಿಗಳನ್ನು," ಎಂದು ತನ್ನ ನಿಲುವನ್ನು ಸ್ಪಷ್ಟಪಡಿಸಿಕೊಂಡ.

ಇವನಿಗೆ ವಿವೇಕ ಹೇಳುವುದರ ಬದಲು, ಕೋಣನ ಮುಂದೆ ಕಿಂದರಿ ಬಾರಿಸಿದ್ದರೆ, ಆ ಕೋಣ ಸಂತೋಷಪಟ್ಟು, ಕಿಂದರಿಯ ಜೊತೆಯಲ್ಲಿ ಕಂಜರಿಯನ್ನು ನುಡಿಸು ಎಂದು ಹೇಳುತಿತ್ತೊ ಏನೊ! ಇವನ ತೇಜೋ ವಧೆಯಾಗಲೆಂದು ನಿರ್ಧರಿಸಿದೆ. ಸೀನಿಯ ನಿವಾಸಕ್ಕೆ ಅವನನ್ನು ಎಳೆದು ಕೊಂಡು ಹೋದೆ.

ನಮ್ಮ ಸೀನಿ, ತುಂಬು ವಿದ್ವಾಂಸ, ವಿಷ್ಯೊ ವಿಷಯಗಳನ್ನು ತಿಳಿದುಕೊಂಡಿದ್ದರೂ, ತಿಳಿಯಬೇಕಾಗಿರುವ ವಿಷಯ ಬಹಳವಿದೆ ಎಂಬುದು ಅವನ ಸಿದ್ಧಾಂತ.

ಅವನ ಮನೆಯನ್ನು ಸೇರಿದ ಮೇಲೆ, ಸೀನಿಗೆ ರಾಯನ ಪರಿಚಯ ಮಾಡಿಸಿದೆ. ಹಾಗೆಯೇ ಇವನು ಸ್ವಲ್ಪ ವಕ್ರನೆಂದು ತಿಳಿಸಲು, ನನ್ನ ಎಡ ಹುಬ್ಬನ್ನು ಹಾರಿಸಿದೆ ಸೀನಿ ಸಿದ್ಧನಾದ. ಕುಶಲ ಸಂಭಾಷಣೆಯಾದ ನಂತರ, ಮಾತಿಗೆ ನಾನೇ ಅಂಕುರಾರ್ಪಣ ಮಾಡಿದೆ.

"ಏನು ಸೀನಿ-ನಂಬೂದ್ರಿಪಾದ್ ಸರಕಾರ ಬಂದು ಒಂದು ವರ್ಷವಾಗುತ್ತಾ ಬಂದಿತು, ಇನ್ನೂ ಉರುಳಲಿಲ್ಲವಲ್ಲ"—

''ನಮಗೆ ಬಹುಮತವಿದೆ, ಅದು ಹೋದರೆ, ನಾವೇ ಹೋಗುತ್ತೇವೆ ಎಂದು ಅಚ್ಯುತಮೆನನ್‌ರವರು ಹೇಳಲಿಲ್ಲವೇ. ಅದಕ್ಕೆ ನಾವು ಯಾಕೆ ತೊಂದರೆಪಟ್ಟುಕೊಳ್ಳಬೇಕು" ಎಂದ.

ಅವರ ವಿದ್ಯಾಭ್ಯಾಸ ಮಸೂದೆ, ಭೂಸುಧಾರಣೆಗಳು ಬಹಳ ಜಿಜ್ಞಾಸೆಗೆ ಎಡೆ ಕೊಟ್ಟಿವೆ ಎಂದು ರಾಯನ ಮುಖ ನೋಡಿದೆ, ರಾಯ ನಸುನಕ್ಕ.

ಸೀನಿ, ಹೌದು, ಹೌದು ಎಂದು ಕಿಟಕಿಯಿಂದ ಹೊರನೋಡುತ್ತಿದ್ದ. ಇದೇನು ಮೌನ ಎಂದು ಹೆದರಿಕೆಯಾಯಿತು. ರಾಯನನ್ನು ತೋಳನಿಂದ ತಿವಿದು ಎಚ್ಚರಿಸಿದೆ.

ರಾಯ ಬಾಯಿ ಬಿಚ್ಚಿದ,

ನೋಡಿ ಸ್ವಾಮಿ, ಕೇರಳದಲ್ಲಿ ಶಾಂತಿ ಭಂಗವಾಗುತ್ತಿದೆ. ಜನರು ಭಯದಿಂದ ತತ್ತರಿಸುತ್ತಿದ್ದಾರೆ.

ಪಾರ್ಟಿಯು ನ್ಯಾಯಾಲಯವಾಗಿದೆ. ಎಂದಿಷ್ಟು ಮಾತಾಡುವುದರಲ್ಲಿ,

''ಸಾಕು ಮಾಡಯ್ಯ ನಿನ್ನ ಕಂತೇನ," ಎಂದು ಏಕವಚನಕ್ಕಿಳಿದ-ಸೀನಿ.

"ನಿನಗೇನಯ್ಯ ಗೊತ್ತು ಕೇರಳದ ಸಮಾಚಾರ. ಅಲ್ಲಿನ ರೈತರು ಕಷ್ಟಪಟ್ಟು, ಎರಡು ಬೆಳೆ ತೆಗೆದರೂ ಬಡವರಾಗಿದ್ದಾರೆ. ಮೀನು ಹಿಡಿಯುವ, ತೆಂಗಿನ ನಾರಿನಿಂದ ಅನೇಕ ಉಪಯುಕ್ತ ಸಾಮಾನುಗಳನ್ನು ತಯಾರಿಸುವ ಉದ್ಯಮದಲ್ಲಿ ಅನೇಕರು ತೊಡಗಿದ್ದಾರೆ. ಗೇರು ಬೀಜ, ಮತ್ತು ರಬ್ಬರ್ ಉದ್ಯಮಗಳು ಅಲ್ಲಿವೆ. ಆದರೆ ನಮ್ಮ ದೇಶದಲ್ಲಿರುವಂತೆ, ಆ ದೇಶದಲ್ಲಿ ಭಾರಿ ಉದ್ಯಮಗಳು ಇಲ್ಲ. ದೊಡ್ಡ ದೊಡ್ಡ ಟೀ ತೋಟಗಳು ಬ್ರಿಟಿಷರದ್ದು. ಅದನ್ನು ರಾಷ್ಟ್ರೀಕರಣ ಮಾಡಿದರೆ ಥೇಂಸ್ ನದಿಯ ಜೇಷ್ಠ(ಪುತ್ರರಾದ ಕೆಲವರಿಗೆ, ಆಕಾಶ ತಲೆಯ ಮೇಲೆ ಬಿದ್ದು ಹೋಗುತ್ತದೆ. ಎಂದು ಹಾಗೇ ಬಿಟ್ಟಿದ್ದಾರೆ.

ಬರಗಾಲದಲ್ಲಿ ಬಹಳ ಕಷ್ಟಪಟ್ಟರು. ಬಹು ಜನಭರಿತವಾದ ನಾಡು. ಬಡವರೇ ಬಹು ಹೆಚ್ಚು. ಆದರೂ ಹೆಣ್ಣು-ಗಂಡು ಎಂಬ ಭೇದವೆಣಿಸದೆ, ವಿದ್ಯೆಗೆ ಅವರು ಬಹಳ ಬೆಲೆ ಕೊಡುವಂತಹವರು, ನಾನು ಹೇಳಿದ್ದು ಸಾಮಾನ್ಯವಾಗಿ, ನಿಮ್ಮಂತಹ ಕಿರಾತರೂ ಅಲ್ಲಿದ್ದಾರೆ—ಎಂದು ರಾಯನನ್ನೂ ನನ್ನನ್ನೂ ನುಂಗಿಬಿಡುವಂತೆ ನೋಡಿದ.

"ತಿಂಗಳೆಲ್ಲವೂ ದುಡಿದ ಉಪಾಧ್ಯಾಯನಿಗೆ ಸಲೀಸಾಗಿ ಸಂಬಳ ಕೊಡುವುದಕ್ಕೆ ನಿಮಗೆ ಬಹು ಸಂಕಟವಾಗುತ್ತದೆ ಅಲ್ಲವೆ?

ವಿನೋಬಾ ಭಾವೆಯರ ಪಾದಯಾತ್ರೆಯಲ್ಲಿ ಹತ್ತು ಮಾರು ನಡೆದು, ಹತ್ತು ಸರ್ತಿ ಫೋಟೊದಲ್ಲಿ ಬೀಳಿಸಿಕೊಳ್ಳುವ ನೀವು, ಅವರ ತತ್ವ ಪ್ರತಿಪಾದನೆಗೂ, ಕೇರಳದ ಭೂಸುಧಾರಣೆಗೂ ಇರುವ, ತೃಪ್ತಿ-ಅತೃಪ್ತಿಗಳನ್ನು ವಿಮರ್ಶಿಸಿರುವಿರಾ—" ಎಂದು ಆರ್ಭಟಿಸಿದ.

ನಾನು ಹೇಳುತ್ತೇನೆ. ಕೇರಳದಲ್ಲಿ ಅಶಾಂತಿಗೆ ನೀವು ಕಾರಣರು. ಉದಯಭಾನು ಒಮ್ಮೆ ಹೇಳಲಿಲ್ಲವೇ, ಕೇರಳದಲ್ಲಿ ಶಾಂತಿ ಇದ್ದರೆ ಅದು ನಿಮ್ಮಿಂದ, ಎಂದು. ಈಗ ಅಶಾಂತಿ ಇದ್ದರೆ ಅದಕ್ಕೆ ಯಾರು ಕಾರಣ—ಯೋಚನೆ ಮಾಡಿ,

"ನಿಮಗೆ ನಾಚಿಕೆ ಬೇಡವೇ ? ಶುದ್ಧ ಜಾತೀಯ ಸಂಸ್ಥೆಯಾದ ಮುಸ್ಲಿಂಲೀಗಿನೊಡನೆ ನಂಟಸ್ತನ, ವಿವಿಧ ಪ್ರಾಂತದಲ್ಲಿ ವಿವಿಧ ಧೋರಣೆಯ ಪಿ.ಎಸ್.ಪಿ. ಯೊಡನೆ ಒಡಂಬಡಿಕೆ ನಡೆಸಿ ಸರ್ಕಾರವನ್ನುರುಳಿಸುವ ಹೋರಾಟಗಳು."

ನೀವು ಅಧಿಕಾರದಲ್ಲಿದ್ದು ಸಾಧಿಸಿದ್ದೇನು ?

ನೀವು ಗಾಂಧಿ, ನೆಹರು ಹೆಸರುಗಳನ್ನು ಉಪಯೋಗಿಸಲು ಅನರ್ಹರು.

ನಂಬೂದ್ರಿಪಾದ್ ಹೇಳಿಕೆಯನ್ನು ಓದಿರಲೇ ಬೇಕು-ಅಲ್ಲವೇ ಎಂದು ರಾಗವಾಗಿ ನಿಲ್ಲಿಸಿದ.

ಸೀನಿ ಪ್ರಶಾಂತವಾಗಿದ್ದ. "ಏನು ಹೇಳಿದ್ದಾರೆ ಎಂದೆ ?"

ಡಾಕ್ಟರ್ ಲೋಹಿಯರಂತೆ, ಇನ್ನು ಏಳು ವರ್ಷದಲ್ಲಿ ಕೇಂದ್ರ ಸರ್ಕಾರ ನಮ್ಮದಾಗುತ್ತದೆ ಎಂದು ಹೇಳಲಿಲ್ಲ.

ಬರುವ ಚುನಾವಣೆಯಲ್ಲಿ, ಕೇರಳ, ಆಂಧ್ರ, ಬಂಗಾಳದ ಪ್ರಾಂತ ಸರ್ಕಾರಕ್ಕೆ ನಾವು ಬರುತ್ತೇವೆ.

ಕೇಂದ್ರ ಪಾರ್ಲಿಮೆಂಟಿನಲ್ಲಿ ನಮ್ಮ ಸಂಖ್ಯಾಬಲವನ್ನು ದ್ವಿಗುಣಗೊಳಿಸಿಕೊಳ್ಳುತ್ತೇವೆ'' ಎಂದು ಹೇಳಿದ್ದಾರೆ.

''ನೋಡಯ್ಯ, ಅದು ಕ್ರಾಂತಿಕಾರಿಯ ವಿನಯ-ಗಾಂಭೀರ್ಯಗಳನ್ನು ಪ್ರದರ್ಶಿಸುತ್ತದೆ."

"ಹಾಗಾದರೆ, ಕಮ್ಯೂನಿಸ್ಟರು ಇಷ್ಟಬಂದಂತೆ ಆಳುವುದಕ್ಕೆ ಬಿಟ್ಟುಬಿಡಬೇಕೆ" ಎಂದು ರಾಯ ಪ್ರಶ್ನಿಸಿದ.

ಕಮ್ಯೂನಿಸ್ಟರು, ನೇಮುಪಾಲಕರು, ನೀವು ಒಪ್ಪಿ, ಆಳುತ್ತಿರುವ ರಾಜ್ಯಾಂಗದ ಚೌಕಟ್ಟಿನಲ್ಲಿಯೇ ಅವರೂ ರಾಜ್ಯಭಾರ ನಡೆಸುತ್ತಿದ್ದಾರೆ. ಆದರೆ ಅವರು ಸರ್ಕಾರವನ್ನು ನಡೆಸುವ ಕ್ರಮ, ನಡೆಸಬೇಕೆಂದಿರುವ ಕಾರ್ಯಕ್ರಮ-ಮೆಚ್ಚುವಂತಹದು. ಕೇರಳದ ರಾಜ್ಯಪಾಲರ ಭಾಷಣವನ್ನು ಓದಿ. ಎಷ್ಟು ಸಂತೋಷವಾಗುತ್ತದೆ" ಎಂದು ಹಳೆಯ ಪತ್ರಿಕೆಯ ಪ್ರತಿಯೊಂದನ್ನು ಕೊಟ್ಟ.

ಕರಗದ ಮೂರನೆ ದಿನ ನಮ್ಮ ಮನೆಗೆ ಊಟಕ್ಕೆ ಬನ್ನಿ, ಆ ದಿನ ಕೇರಳದ ರಾಜ್ಯೋತ್ಸವ ಎಂದು ನಮ್ಮಿಬ್ಬರನ್ನೂ ಊಟಕ್ಕೆ ಆಹ್ವಾನಿಸಿದ.

ಸೀನಿಯ ವಾದಸರಣಿಯನ್ನು ರಾಯ ಒಪ್ಪಿದರೂ ಸೀನಿಯ ವಾದವನ್ನು ಒಪ್ಪುವವನಾಗಿರಲಿಲ್ಲ.

ನೀವು "ಕಮ್ಯೂನಿಸ್ಟರೆ" ಎಂದು ಸೀನಿಯನ್ನು ಕೇಳಿದ.

"ನಾನು ಕಮ್ಯೂನಿಸ್ಟನಲ್ಲ, ಆದರೆ ನನ್ನ ಅಭಿಪ್ರಾಯದಲ್ಲಿ, ನಿಸ್ವರು—ಕಮ್ಯೂನಿಸ್ಟರು, ಸಾಮ್ಯವಾದದ—ಸುಭಟರು" ಎಂದು ತಿಳಿಸಿದ.

ಹೊರಡುವಾಗ, ಕೈ ಕುಲುಕಿದ ಸೀನಿ, ರಾಯನಿಗೆ, ಮಗೂ, ನಿನಗೆ ಲೋಕಾನುಭವ ಕಮ್ಮಿ, ಅರ್ಥಂಬರ್ಥ ತಿಳಿದುಕೊಂಡು ಹಾರಾಡಬಾರದು. ಹೋಗಿ ಬಾ—

"ಕೇರಳವೆಂದರೆ—ಕಲ್ಪತರು" ಎಂದು ಬೀಳ್ಕೊಂಡ.

ದಾರಿಯಲ್ಲಿ ಬರುವಾಗ, ಕೇರಳವೆಂದರೆ ಕಲ್ಪತರು ಎಂದರಲ್ಲ ಹಾಗೆಂದರೇನು ಎಂದು ಕೇಳಿದ—ರಾಯ.

ಕೇರಂ ಎಂದರೆ, ಮಲೆಯಾಳ ಭಾಷೆಯಲ್ಲಿ ತೆಂಗು ಎಂದರ್ಥ. ಕಲ್ಪತರುವೆಂದರೂ ತೆಂಗು ಎಂದರ್ಥ. ಅದರಿಂದಲೇ ಕೇರಳವೆಂದು ಹೆಸರು ಬಂದುದು. ಆದರೆ ಸೀನಿಯ ಅರ್ಥವೇ ಬೇರೆ ಎಂದೆ.

"ಏನು" ಎಂದಿಷ್ಟೆ ಕೇಳಿದ.

ಸಾಮಾನ್ಯ ಜನರಿಗೆ ಇಂದು ಬೇಕಾಗಿರುವುದು, ಪ್ರಜಾ ಹಿತಚಿಂತಕ ಸರ್ಕಾರ, 144ನೇ ಸೆಕ್ಷನ್, ಮದ್ದು ಗುಂಡುಗಳ ನೆರವು ಪಡೆಯದೆ ರಾಜ್ಯವಾಳಬಲ್ಲ ಸರ್ಕಾರ ಬೇಕು. ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಗೊಳಿಸುವ ಸರ್ಕಾರ ಶಕ್ತಿಶಾಲಿಯಾಗಿರಬೇಕು. ಅದನ್ನು ಕರುಣಿಸುವ ಸರ್ಕಾರಕ್ಕೆ ಕಲ್ಪತರು, ಕಲ್ಪವೃಕ್ಷವೆಂದು ಸೀನಿ ಕರೆದಿದ್ದಾನೆ.

ಜನರ ಈ ನಿರೀಕ್ಷೆಯನ್ನು ಸಾಧಿಸಬಲ್ಲದ್ದು ಕೇರಳದ ಕಮ್ಯೂನಿಸ್ಟ್ ಸರ್ಕಾರ ಮಾತ್ರ,

ಆದುದರಿಂದಲೆ, ಅವನು ಹೇಳಿದ್ದು.

ಕೇರಳವೆಂದರೆ—ಕಲ್ಪತರು—

ರಾಷ್ಟ್ರೀಯ

ಪಶ್ಚಿಮ ಬಂಗಾಳ ಶಾಸನ ಸಭೆಯಲ್ಲಿ ಗೊಂದಲ

(೩ನೇ ಪುಟದಿಂದ)

ಮಂತ್ರಿಗಳ ಹೇಳಿಕೆ ಯಾರಿಗೂ ಕೇಳದೆ ಅವರು ಮುಂದುವರಿಸಲಾಗಲಿಲ್ಲ. ಸಭೆಯಲ್ಲಿ ತೀವ್ರವಾದ ಗೊಂದಲವೇರ್ಪಟ್ಟದ್ದರಿಂದ, ಮುಖ್ಯ ಮಂತ್ರಿಗಳು ಮಾರನೆಯ ದಿನ ಪತ್ರಿಕಾ ಸಮ್ಮೇಳನದಲ್ಲಿ ತಮ್ಮ ಹೇಳಿಕೆಯನ್ನು ಕೊಡುವ ಪ್ರಸಂಗ ಒದಗಿ ಬಂದಿತು.

ವಿರೋಧ ಪಕ್ಷದ ನಾಯಕರೂ ಕಮ್ಯೂನಿಸ್ಟ್ ಪಕ್ಷದ ಮುಂದಾಳುಗಳೂ ಆದ ಜ್ಯೋತಿ ಬಸುರವರು ಮುಖ್ಯ ಮಂತ್ರಿಗಳ ನಡವಳಿಕೆ ಬಗ್ಗೆ ಕ್ರಿಯಾಲೋಪವೆತ್ತಿದಾಗ ಸಭೆಯಲ್ಲಿ ಮತ್ತೆ ಗೊಂದಲವೇರ್ಪಟ್ಟು, ಸಭಾಧ್ಯಕ್ಷರು ಸಭೆಯನ್ನು ಮುಂದುವರಿಸಬೇಕಾಯಿತು. ಇದೇ ಪರಿಸ್ಥಿತಿ ಎರಡನೆಯ ದಿನವೂ ಮುಂದುವರಿದಿದ್ದರಿಂದಾಗಿ ಅಧ್ಯಕ್ಷರು ಸಭೆಯನ್ನು ದೀರ್ಘ ಕಾಲ ಮುಂದೆ ಹಾಕಿದ್ದಾರೆ.

ಪಶ್ಚಿಮ ಬಂಗಾಳ ಶಾಸನ ಸಭೆಯಲ್ಲಿ ವಿರೋಧ ಪಕ್ಷಗಳು ಪ್ರಬಲವಾಗಿರುವುದರಿಂದ, ಬಿ. ಸಿ. ರಾಯ್ ಸರಕಾರದ ನೀತಿಗಳಿಗೆ ಜನತೆಯಲ್ಲಿ ತೀವ್ರವಾದ ಅತೃಪ್ತಿ ಇರುವುದರಿಂದ ಕಾಂಗ್ರೆಸ್ ಪಕ್ಷದಲ್ಲಿ ತೀವ್ರವಾದ ಬಿಕ್ಕಟ್ಟು ತಲೆದೋರಿದೆ. ವಿರೋಧ ಪಕ್ಷಗಳ ಸದಸ್ಯರು ಕಳೆದ ವಾರ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದರು. ಎರಡು ದಿನಗಳು ಚರ್ಚೆಯಾದ ನಂತರ, ನಿರ್ಣಯವನ್ನು ಮತಕ್ಕೆ ಹಾಕಿದಾಗ ಸಭೆಯಲ್ಲಿ ಗೊಂದಲವೇರ್ಪಟ್ಟು, ನಿರ್ಣಯವು ಬಿದ್ದು ಹೋಯಿತೆಂದು ಅಧ್ಯಕ್ಷರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದ ಕಾಂಗ್ರೆಸ್ಸಿನಲ್ಲಿ ತಲೆದೋರಿರುವ ಬಿಕ್ಕಟ್ಟನ್ನು ಪರಿಹರಿಸಲು ಕಾಂಗ್ರೆಸ್ ಹೈಕಮಾಂಡ್ ಯತ್ನಿಸುತ್ತಿದೆ. ಜನತೆಯಲ್ಲಿ ತೀವ್ರವಾದ ಅತೃಪ್ತಿ ಮೂಡಿರುವುದರಿಂದ ಬಿ. ಸಿ. ರಾಯ್ ಸರಕಾರ ರಾಜಿನಾಮೆ ಈಯಬೇಕೆಂದು ಒತ್ತಾಯ ಬರುತ್ತಿದೆ.

ಉತ್ತರ ಪ್ರದೇಶ ಪಿ. ಎಸ್. ಪಿ.ಯಿಂದ

೧,೦೦೦ ಮಂದಿ ಸದಸ್ಯರ ರಾಜಿನಾಮೆ !

ಪಿ. ಎಸ್. ಪಿ. ಪಕ್ಷದ ಮುಖ್ಯವಾದ ನೆಲೆಯೆನ್ನಿಸಿದ್ದ ಉತ್ತರ ಪ್ರದೇಶದಲ್ಲಿ ಒಂದು ಸಾವಿರ ಸದಸ್ಯರು ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿ ಕಮ್ಯೂನಿಸ್ಟ್ ಪಕ್ಷ ಸೇರಲು ನಿರ್ಧರಿಸಿದ್ದಾರೆ.

ಉತ್ತರ ಪ್ರದೇಶದ ದಿಯೋರಿಯ ಜಿಲ್ಲೆಯಲ್ಲಿನ ಪಿ. ಎಸ್. ಪಿ. ಸದಸ್ಯರು ಪಕ್ಷಕ್ಕೆ ರಾಜಿನಾಮೆ ಸಲ್ಲಿಸಿ ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಲು ಅರ್ಜಿ ಸಲ್ಲಿಸಿದ್ದಾರೆ. ಪಿ. ಎಸ್. ಪಿ. ಜಿಲ್ಲಾ ಸಮಿತಿಯ ಸದಸ್ಯರಾದ ಜಗನ್ನಾಥ್ ದುಬೆಯವರ ನೇತೃತ್ವದಲ್ಲಿ 35 ಮಂದಿ ಸದಸ್ಯರು ಪಕ್ಷದಿಂದ ಹೊರ ಬಂದಿದ್ದಾರೆ. ಇವರ ನಿರ್ಗಮನದಿಂದ ಪ್ರಜಾ ಸೋಷಲಿಸ್ಟ್ ಪಕ್ಷಕ್ಕೆ ಭಾರೀ ಪೆಟ್ಟು ಬಿದ್ದಿದೆ.

ಅವರು ತಮ್ಮ ರಾಜೀನಾಮೆಯನ್ನು ಸಲ್ಲಿಸುವುದರ ಮೂಲಕ ಪ್ರಜಾ ಸೋಷಲಿಸ್ಟ್ ಪಕ್ಷದ ಪ್ರತಿಗಾಮೀ ನೀತಿಯನ್ನು, ಅಮೇರಿಕನ್ ಸಾಮ್ರಾಜ್ಯವಾದಿಗಳ ಪರವಾದ ನೀತಿಯನ್ನು ಬಯಲಿಗೆಳೆದಿದ್ದಾರೆ. ಕಮ್ಯೂನಿಸ್ಟ್ ಪಕ್ಷವೊಂದೇ ನಿಜವಾಗಿ ಜನತೆಯ ಏಳ್ಗೆಗಾಗಿ ದುಡಿಯುವುದೆಂಬುದರ ಬಗ್ಗೆ ತಮ್ಮ ದೃಢ ವಿಶ್ವಾಸವನ್ನು ವ್ಯಕ್ತಗೊಳಿಸಿ, ಕಮ್ಯೂನಿಸ್ಟ್ ಪಕ್ಷವನ್ನು ಸೇರಲು ನಿರ್ಧರಿಸಿದ್ದಾರೆ. ಕಮ್ಯೂನಿಸ್ಟ್ ಪಾರ್ಟಿಯು ಪಿ. ಎಸ್. ಪಿ.ಯನ್ನು ತ್ಯಜಿಸಿರುವ ಈ ಸದಸ್ಯರನ್ನು ಸ್ವಾಗತಿಸಿದೆ. ಉತ್ತರ ಪ್ರದೇಶದ ಪಾರ್ಟಿ ಸಮಿತಿಯ ಕಾರ್ಯದರ್ಶಿಯವರು, ಮುಂದಿನ ಕಾರ್ಯಕ್ರಮವನ್ನು ಕುರಿತು ಪರ್ಯಾಲೋಚಿಸಲು ದಿಯೋರಿಯಾ ಜಿಲ್ಲೆಗೆ ಭೇಟಿ ಇತ್ತಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್ ಗೊಂದಲದಲ್ಲಿ !

ಇತ್ತೀಚೆಗೆ ದೆಹಲಿ ಮುನಿಸಿಪಲ್ ಕಾರ್ಪೋರೇಷನ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಆದ ಸೋಲು, ಪಶ್ಚಿಮ ಬಂಗಾಳದಲ್ಲಿ ಮಾಜಿ ಸಚಿವ ಸಿದ್ಧಾರ್ಥ ರೇಯವರ ರಾಜೀನಾಮೆ ಮತ್ತು ಅವರ ಹೇಳಿಕೆಯಲ್ಲಿ ಆರೋಪಿಸಲಾಗಿರುವ ಲಂಚ ಮುಸುವತ್ತುಗಳ ಆಪಾದನೆಗಳು, ಮೈಸೂರು, ಆಂಧ್ರ ಪ್ರದೇಶ, ಒರಿಸ್ಸಾ, ಪಂಜಾಬ್ ಪ್ರಾಂತಗಳಲ್ಲಿ ಕಾಂಗ್ರೆಸ್ಸಿನಲ್ಲಿ ಇರುವ ಒಳಜಗಳ ಇವು ಹೈಕಮಾಂಡ್‌ನಲ್ಲಿ ಗೊಂದಲಕ್ಕೀಡು ಮಾಡಿದೆ.

ಪಕ್ಷದಲ್ಲಿ ಶಿಸ್ತು ಇಲ್ಲವೇ ಇಲ್ಲವಾಗಿ ಸ್ವಾರ್ಥಪರತೆ ಬೆಳೆಯುತ್ತಿದೆ ಎಂಬುದನ್ನು ಹಿರಿಯ ನಾಯಕರುಗಳು ಬಹಿರಂಗವಾಗಿ ಒಪ್ಪಿಕೊಳ್ಳುತ್ತಿದ್ದಾರೆ. ಅವಿಶ್ವಾಸ ನಿರ್ಣಯಗಳಿಗೆ ಸಹಿಸಂಗ್ರಹಣ ಕಾರ್ಯವನ್ನು ಮಾಡುವುದಕ್ಕೆ ಅನುಮತಿ ಇತ್ತಿರುವುದನ್ನು ಹಿಂದೆ ಪಡೆಯಬೇಕೆ ಎಂಬ ಪ್ರಶ್ನೆಯು ಇನ್ನೂ ಇತ್ಯರ್ಥವಾಗಿಲ್ಲ. ನಾನಾ ಕಡೆಗಳಿಂದ ಬಂದಿರುವ ಈ ಬಿಕ್ಕಟ್ಟನ್ನು ಪರಿಹರಿಸಲು ಹೈಕಮಾಂಡ್ ತಲ್ಲಣಿಸುತ್ತಿದೆ. ಏಪ್ರಿಲ್ 5ರಂದು ನಡೆಯಲಿರುವ ಕಾರ್ಯಕಾರೀ ಸಮಿತಿಯಲ್ಲಿ ಈ ಬಗ್ಗೆ ದೃಢವಾದ ನಿರ್ಧಾರವನ್ನು ಕೈಗೊಂಡು ತಕ್ಕ ಕ್ರಮ ತೆಗೆದುಕೊಳ್ಳುವ ನಿರೀಕ್ಷೆ ಇದೆ. ಒಟ್ಟಿನಲ್ಲಿ ಮುಂದಿನ ವಾರದಲ್ಲಿ ಕಾಂಗ್ರೆಸ್ಸಿನಲ್ಲಿರುವ ಬಿಕ್ಕಟ್ಟು ಸ್ಪಷ್ಟ ರೂಪ ತಾಳುವುದರಲ್ಲಿ ಸಂಶಯವಿಲ್ಲ.

ಕೇರಳ ವಿದ್ಯಾಭ್ಯಾಸ ಮಸೂದೆ

ಸುಪ್ರೀಂ ಕೋರ್ಟಿಗೆ ಒಪ್ಪಿಸಲಾಗಿರುವ ಕೇರಳ ವಿದ್ಯಾಭ್ಯಾಸ ಮಸೂದೆಯು ಸುಪ್ರೀಂ ಕೋರ್ಟಿನ ಮುಂದೆ ಏಪ್ರಿಲ್ 29ರಂದು ಬರಲಿದೆ. ಕೇಂದ್ರ ಸರಕಾರದ ಪರವಾಗಿ ಅಟರ್ನಿ ಜನರಲ್ ಎಂ. ಸಿ. ಸೆಟಲ್‌ವಾಡ್‌ರವರು ವಾದಿಸಲಿದ್ದಾರೆ. ಕೇರಳ ಸರಕಾರ ಮತ್ತು ಇತರ ಅನೇಕ ಸಂಘ ಸಂಸ್ಥೆಗಳು ಕೋರ್ಟಿನಲ್ಲಿ ವಾದ ಮಾಡಲಿದೆ. ವಾದಗಳೆಲ್ಲವೂ ಮುಗಿದ ನಂತರ ಸುಪ್ರೀಂ ಕೋರ್ಟು ತೀರ್ಪನ್ನೀಯಲಿದೆ.

ಹಿಂದುಸ್ತಾನ್ ವಿಮಾನ ಕಾರ್ಖಾನೆ

ಜನರಲ್ ಮ್ಯಾನೇಜರ್ ಶ್ರೀ ನಾಗೇಶ್‌ರಿಗೆ ಅರ್ಧಚಂದ್ರ

ಹಿಂದೂಸ್ಥಾನ್ ವಿಮಾನ ಕಾರ್ಖಾನೆ ಜನರಲ್ ಮ್ಯಾನೇಜರ್ ಆಗಿರುವ ಶ್ರೀ ನಾಗೇಶ್‌ರವರನ್ನು ಇದೇ ಏಪ್ರಿಲ್ ತಿಂಗಳಿಂದ ವರ್ಗಾಯಿಸಲಾಗುವುದೆಂದು ಅಧಿಕೃತವಾಗಿ ತಿಳಿದು ಬಂದಿದೆ: ವಿಮಾನ ಕಾರ್ಖಾನೆ ನೌಕರರ ಬೇಡಿಕೆಗಳ ವಿವಾದ ಪ್ರಶ್ನೆಯಲ್ಲಿ ಶ್ರೀ ನಾಗೇಶ್‌ರವರು ಪರಿಸ್ಥಿತಿಯನ್ನು ಹದಗೆಡಿಸಿದರೆಂದೂ, ನೌಕರರ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿಯೂ, ಕಾರ್ಖಾನೆಯ ಆಡಳಿತವನ್ನು ನಿರ್ವಹಿಸುವುದರಲ್ಲಿಯೂ ಅಸಮರ್ಥತೆಯನ್ನು ತೋರ್ಪಡಿಸಿಕೊಂಡಿದ್ದಾರೆಂದೂ, ಈ ಕಾರಣದಿಂದಾಗಿ ಅವರನ್ನು ಜನರಲ್ ಮ್ಯಾನೇಜರ್ ಹುದ್ದೆಯಿಂದ ತೆಗೆಯಲಾಗಿದೆಯೆಂದೂ ತಿಳಿದು ಬಂದಿದೆ.

ಜನರಲ್ ಮ್ಯಾನೇಜರ್ ಆಗಿದ್ದ ಇವರ ನಿರ್ಗಮನವು ವಿಮಾನ ಕಾರ್ಖಾನೆ ನೌಕರರಿಗೆ ದೊರೆತ ವಿಜಯವೆಂದು ಹೇಳಬಹುದು. ಹೊಸದಾಗಿ ಅಧಿಕಾರ ವಹಿಸಿಕೊಳ್ಳಲಿರುವ ಏರ್‌ಮಾರ್ಷಲ್ ಇಂಜಿನಿಯರ್‌ರವರು ಕೆಲಸಗಾರರ ಪ್ರಶ್ನೆಗಳ ಬಗ್ಗೆ ಸರಿಯಾದ ಧೋರಣೆ ಅನುಸರಿಸಿ ವಿವಾದಗಳನ್ನು ಇತ್ಯರ್ಥಗೊಳಿಸಲು ಸಹಾಯಕವಾಗುವರೇ ಎಂದು ನೋಡಬೇಕಿದೆ.

ಪತ್ರಿಕೋದ್ಯಮಿಗಳಿಗೆ ಕ್ಷಮಾಪಣೆ

ಜನರ್ ಮ್ಯಾನೇಜರ್ ಶ್ರೀ ನಾಗೇಶ್‌ರವರು ನಗರದ ಪತ್ರಕರ್ತರಿಗೆ ಕ್ಷಮಾಪಣೆ ಕೇಳಿಕೊಂಡರು. ಪತ್ರಿಕೋದ್ಯೋಗಿಗಳ ಬಗ್ಗೆ ಅವರು ತೋರಿದ್ದ ಅಸಭ್ಯ ವರ್ತನೆಯನ್ನು ಪ್ರತಿಭಟಿಸಿ ಪತ್ರಿಕೋದ್ಯೋಗಿಗಳು ಶ್ರೀ ನಾಗೇಶ್‌ರವರ ಯಾವ ಪತ್ರಿಕಾ ಸಮ್ಮೇಳನಕ್ಕಾಗಲೀ, ಕೂಟಕ್ಕಾಗಲೀ ಈವರೆಗೆ ಹೋಗಿರಲಿಲ್ಲ. ಈ ಪ್ರತಿಭಟನೆಯ ಫಲವಾಗಿ ಅವರು ಕೇಳಿಕೊಂಡರು ಎಂದು ತಿಳಿದು ಬಂದಿದೆ.

ಬೆಂಗಳೂರು

ಮೋಟಾರು ಕಾರ್ಮಿಕರ ಜಯ

ಸೋಮವಾರ ತಾ|| 17-3-58 ರಂದು, ನ್ಯಾಷನಲ್ ಫೆಡರೇಶನ್ ಆಫ್ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಆಫ್ ಇಂಡಿಯಾ, ಸಂಚಾಲಕ ಕಾರ್ಯದರ್ಶಿ ಹಾಗೂ ಟ್ಯಾಕ್ಸಿ, ಆಟೋರಿಕ್ಷಾ ಡ್ರೈವರ್ ಮತ್ತು ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಂ. ಎಸ್. ರಾಮರಾವ್, ಉಪಾಧ್ಯಕ್ಷ ಶ್ರೀ ಅಹಮದ್ದುಲ್ಲಾ ಖಾನ್ ಮತ್ತು ಉಪ ಕಾರ್ಯದರ್ಶಿ ಶ್ರೀ ಮಹಮದ್ ಅಮೀರ್‌ರವರು, ಸಂಸ್ಥಾನದ ಐ.ಜಿ.ಪಿ. ಶ್ರೀ ಕೆ. ಪಿ. ಮೊನಪ್ಪನವರನ್ನು ಭೇಟಿಮಾಡಿ, ಟ್ಯಾಕ್ಸಿ, ಆಟೋರಿಕ್ಷಾ ಕಾರ್ಮಿಕರ ಕುಂದು ಕೊರತೆಗಳು, ಪೋಲೀಸ್ ಜುಲ್ಮ್ ಮತ್ತು ಪ್ರೈವೆಟ್ ಟ್ಯಾಕ್ಸಿಗಳ ಹಾವಳಿಯ ಬಗ್ಗೆ ಮನವಿ ಪತ್ರವನ್ನು ಸಲ್ಲಿಸಿದರು. ಪೋಲೀಸರಿಂದ ಮೋಟಾರು ಕಾರ್ಮಿಕರ ಮೇಲೆ ನಿತ್ಯವೂ ಆಗುತ್ತಿರುವ ದಬ್ಬಾಳಿಕೆಯನ್ನು ನಿಲ್ಲಿಸಿ, ಅವರಿಂದ ಅನಾವಶ್ಯಕವಾಗಿ ಸಣ್ಣ ಸಣ್ಣ ತಪ್ಪುಗಳಿಗಾಗಿ ಡ್ರೈವಿಂಗ್ ಲೈಸೆನ್ಸ್ ಕಿತ್ತುಕೊಂಡು ತೊಂದರೆಗೊಳಪಡಿಸಕೂಡದೆಂಬುದೇ ಮನವಿಯ ಸಾರಾಂಶವಾಗಿತ್ತು.

ಬೆಂಗಳೂರು ಟ್ಯಾಕ್ಸಿ ಮತ್ತು ಆಟೋರಿಕ್ಷಾ ಕಾರ್ಮಿಕರು ಸಂಘಟಿತರಾಗಿ, ಕಳೆದ ಆರು ತಿಂಗಳಿಂದ ಚಳವಳಿ ನಡೆಸಿದುದರ ಪರಿಣಾಮವಾಗಿ, ಪೋಲೀಸರ ಕಾನೂನು ವಿರೋಧಿ ಹಾಗೂ ಕಾರ್ಮಿಕ ವಿರೋಧಿ ಕ್ರಮವನ್ನು ತಡೆಗಟ್ಟುವುದಾಗಿ ಸಂಸ್ಥಾನದ ಐ. ಜಿ. ಪಿ. ಸಾಹೇಬರು ಕಾರ್ಮಿಕ ಪ್ರತಿನಿಧಿಗಳಿಗೆ ಭರವಸೆಕೊಡಬೇಕಾಗಿಬಂತು. ಮೋಟಾರು ವಾಹನ ಶಾಸನದ ವ್ಯಾಪ್ತಿಯುಳ್ಳ ಅಪರಾಧಗಳಿಗೆ ಲೈಸನ್ಸ್ ತೆಗೆದುಕೊಳ್ಳಕೂಡದೆಂದು ಆಜ್ಞೆ ಮಾಡಿದರು.

ಪ್ರೈವೆಟ್ ಟ್ಯಾಕ್ಸಿಗಳನ್ನು ತಡೆಗಟ್ಟಲು ತೀವ್ರ ಕಾರ್ಯಕ್ರಮ ಕೈಕೊಳ್ಳುವುದಾಗಿ ಐ. ಜಿ. ಪಿ. ಆಶ್ವಾಸನೆ ನೀಡಿದ್ದಾರೆ.

ಮೋಟಾರು ಕಾರ್ಮಿಕರ ಒಂದು ವಿಭಾಗದ ಟ್ಯಾಕ್ಸಿ, ಆಟೋರಿಕ್ಷಾ ಕಾರ್ಮಿಕರ ಐಕ್ಯಮತ್ಯದಿಂದ ಈ ಅತ್ಯಲ್ಪ ಪರಿಹಾರವಾದರೂ ಸಂಸ್ಥಾನದ ಲಾರಿ, ಬಸ್ ಮತ್ತು ಎಲ್ಲಾ ಮೋಟಾರು ಕಾರ್ಮಿಕರಿಗೂ ದೊರೆಯಲು ಸಾಧ್ಯವಾಯಿತು. ಮೋಟಾರು ಕಾರ್ಮಿಕರು ಎಚ್ಚತ್ತು ಸಂಸ್ಥಾನಾದ್ಯಂತ ಬಲವಾದ ಸಂಘಟನೆಯನ್ನು ಕಟ್ಟಿದರೆ, ಅವರ ಅತಿ ಮುಖ್ಯ ಬೇಡಿಕೆಗಳಾದ, ದೇಶದ ಎಲ್ಲಾ ಮೋಟಾರು ಕಾರ್ಮಿಕರ ಹಿತರಕ್ಷಣೆ ಮಾಡುವ ಸಮಾನವಾದ ಶಾಸನ, ಮೋಟಾರು ವಾಹನದ ಶಾಸನಕ್ಕೆ ಅವಶ್ಯಕವಾದ ತಿದ್ದುಪಡಿ, ಸಂಬಳ, ಭತ್ಯ, ರಜಾ ಮೊದಲಾದ ಸೌಲಭ್ಯಗಳನ್ನು ಸಾಧಿಸಬಹುದು.

ಪೆರಿಯಾಪಟ್ಟಣ ಕ್ಷೇತ್ರ ಉಪಚುನಾವಣೆ

ವಿಧಾನ ಸಭಾ ಸದಸ್ಯರಾದ ಶ್ರೀ. ಹೆಚ್. ಎಂ. ಚೆನ್ನಬಸಪ್ಪನವರು ಚುನಾವಣಾ ಪ್ರಚಾರಕ್ಕಾಗಿ ತಮ್ಮ ಕಾರ್ಯಕ್ರಮವನ್ನು ಅಚ್ಚು ಹಾಕಿಸಿ, ಇವರು ನಿಲ್ಲುವ ಸ್ಥಳಗಳಲ್ಲಿ ಜನರು ಹಾಜರಿದ್ದು ಕಾಂಗ್ರೆಸ್ಸಿಗೆ ಬೆಂಬಲಕೊಟ್ಟು ಸಹಕರಿಸಬೇಕೆಂದು ಪ್ರಾರ್ಥಿಸಿದ್ದರು. ಇವರು ಕಾರ್ಯಕ್ರಮದ ಪಟ್ಟಿಯಂತೆ ಅನೇಕ ಊರುಗಳಿಗೆ ಭೇಟಿ ಮಾಡದಿರುವುದು ಮತ್ತು ಹೋದೆಡೆಗಳಲ್ಲೆಲ್ಲಾ ಕಮ್ಯೂನಿಸ್ಟ್ ಪಾರ್ಟಿಯನ್ನು ನಿಂದಿಸಿರುವುದು ಮತ್ತು ತಾವು ಇಲ್ಲಿಗೆ ಕಮ್ಯೂನಿಸ್ಟರು ನಿಂತಿದ್ದರಿಂದ ಹೀಗೆ ಬರಬೇಕಾಯಿತೆಂದೂ ಮತ್ತು ಹಾಗಿಲ್ಲದಿದ್ದಲ್ಲಿ ತಾವು ಕೂತ ಕಡೆಯಲ್ಲಿ ಕಾಂಗ್ರೆಸ್ಸಿಗೆ ಓಟು ಗಳಿಸುವವರಿದ್ದರೆಂದೂ ಮುಂತಾಗಿ ಹೇಳಿ, ಜನರ ಮೇಲೆ ಯಾವ ವಿಧವಾದ ಪರಿಣಾಮವನ್ನು ಬೀರದೆ ನಿರುತ್ಸಾಹಿಗಳಾಗಿ ಹಿಂದಿರುಗಿದ್ದಾರೆ. ಕಾಂಗ್ರೆಸ್ ಸದಸ್ಯರಲ್ಲೇ ಭಿನ್ನಾಭಿಪ್ರಾಯಗಳಿರುವುದರಿಂದಲೂ ಮತ್ತು ಸಾಮಾನ್ಯ ಜನರು ಕೇಳುವ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಡಲೂ ಅಶಕ್ತರಾಗಿರುವುದರಿಂದಲೂ ಅವರ ಪ್ರಚಾರ ನಿಫಲವಾಗಿದೆ. ರಾತ್ರಿ ವೇಳೆಯಲ್ಲಿ ಪ್ರಚಾರ ಕಾರ್ಯ ಬಿರುಸಿನಿಂದ ಸಾಗುತ್ತಿದೆ.

ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯಕರ್ತರು ಹೋದೆಡೆಗಳಲ್ಲೆಲ್ಲಾ ಅಲ್ಲಿಯ ಗ್ರಾಮಸ್ಥರನ್ನು ಸೇರಿಸಿ ಬಹಿರಂಗ ಸಭೆಯನ್ನು ನಡೆಸುತ್ತಿದ್ದಾರೆ. ಗ್ರಾಮಸ್ಥರು ಭಾಷಣಗಳನ್ನು ಕೇಳಿ ಚರ್ಚೆ ನಡೆಸಿ ಅವರ ಸಂಶಯಗಳನ್ನು ಪರಿಹರಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ನಮಗೆ ಅರಿಯದಿದ್ದ ಪಾರ್ಟಿ ಹಿತೈಷಿಗಳು ಬಹು ಮಂದಿ ನಮ್ಮ ಬೆಂಬಲಿಗರಾಗಿದ್ದಾರೆ. ಚುನಾವಣಾ ಕಾರ್ಯದ ಜತೆಯಲ್ಲೆ ರೈತಸಂಘದ ಅವಶ್ಯಕತೆಯನ್ನು ತಿಳಿಸಿ ಅಲ್ಲಲ್ಲಿ ರೈತಸಂಘದ ರಚನೆಯ ಕಾರ್ಯವೂ ನಡೆಯುತ್ತಿದೆ. ಕಾಂಗ್ರೆಸ್ ಇದುವರೆವಿಗೆ ಮಾಡಿರುವ ಭರವಸೆಯನ್ನು ಪೂರೈಸದೆ ಇದ್ದದ್ದನ್ನು ನಮ್ಮಲ್ಲಿ ಹೇಳುತ್ತಿದ್ದಾರೆ. ಗ್ರಾಮದ ಜನರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬೇಕಾದರೆ ರೈತ ಸಂಘಟನೆಗಳ ಜರೂರನ್ನು ಮನಗಾಣುತ್ತಿದ್ದಾರೆ. ಈ ಚುನಾವಣೆಯ ಜಯಾಪಜಯಗಳೇನೇ ಇರಲಿ ಈ ಕ್ಷೇತ್ರದ ರೈತ ಸಮುದಾಯವನ್ನು ಜಾಗ್ರತಗೊಳಿಸಿ ಅವರನ್ನು ಸಂಘಟಿಸುವ ಕಾರ್ಯ ಸತತವಾಗಿ ನಡೆದು ಬರುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಕಮ್ಯೂನಿಸ್ಟ್ ಪಾರ್ಟಿಯ ಧ್ಯೇಯ ಧೋರಣೆಗಳನ್ನು ಈ ಕ್ಷೇತ್ರದ ಪ್ರತಿ ಹಳ್ಳಿಗೂ ತಿಳಿಸಬೇಕಾಗಿರುವುದರಿಂದ ಇರುವ ಅಲ್ಪ ವೇಳೆಯಲ್ಲಿ ಇನ್ನು ಬಿರುಸಿನಿಂದ ನಮ್ಮ ಕಾರ್ಯವನ್ನು ಜರುಗಿಸಬೇಕಾಗಿದೆ. ಆದ್ದರಿಂದ ಜನಶಕ್ತಿ ಓದುಗರು ಪಾರ್ಟಿ ಸದಸ್ಯರು ಮತ್ತು ಹಿತೈಷಿಗಳು ಈ ವಿಳಾಸಕ್ಕೆ ದ್ರವ್ಯ ಸಹಾಯವನ್ನು ಕಳುಹಿಸಬೇಕಾಗಿ ಕೋರುತ್ತೇನೆ.

ಎಂ. ಎನ್. ಉಗ್ರಪ್ಪ,
ಕಮ್ಯೂನಿಸ್ಟ್ ಪಾರ್ಟಿ ಚುನಾವಣಾ ಸಮಿತಿ, ಪೆರಿಯಾಪಟ್ಟಣ

(೯ನೇ ಪುಟ ನೋಡಿ)

ಪ್ರಾಂತೀಯ ಸುದ್ದಿ ಸಂಗ್ರಹ

ಬೇಡಿಕೆಗಳ ದಿನಾಚರಣೆ

ಬೆಂಗಳೂರು

ಅಖಿಲ ಭಾರತ ಕೇಂದ್ರ ಸಂಘಟನೆಯ ಕರೆಯ ಮೇರೆಗೆ ಬೆಂಗಳೂರು ನಗರದ ಟ್ರೇಡ್ ಯೂನಿಯನ್ ಸಂಸ್ಥೆಗಳು ಮಾರ್ಚ್ 27ರಂದು ಬೇಡಿಕೆಯ ದಿನವನ್ನಾಗಿ ಆಚರಿಸಿದುವು. ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್, ಹಿಂದ್ ಮಜ್ದೂರ್ ಸಭಾ, ಕೇಂದ್ರ ಕೈಗಾರಿಕಾ ಕೆಲಸಗಾರರ ಸಂಘ, ಪೋಸ್ಟ್ ಅಂಡ್ ಟೆಲಿಗ್ರಾಫ್ ಕೆಲಸಗಾರರ ಸಂಘ, ಮತ್ತು ಇತರ ಟ್ರೇಡ್ ಯೂನಿಯನ್‌ಗಳು ಒಟ್ಟಾಗಿ 27ರಂದು ಸಂಜೆ ಸುಭಾಷ್ ನಗರದ ಮೈದಾನದಲ್ಲಿ ಬೇಡಿಕೆಗಳ ದಿನಾಚರಣೆಯ ಸಂಬಂಧವಾಗಿ ಬಹಿರಂಗ ಸಭೆಯನ್ನೇರ್ಪಡಿಸಿದ್ದರು. ಅನೇಕ ಟ್ರೇಡ್ ಯೂನಿಯನ್‌ಗಳು ಕೆಲಸಗಾರರು ಸಭೆಗೆ ಮೆರವಣಿಗೆಯಲ್ಲಿ ಆಗಮಿಸಿದ್ದರು.

ಟ್ರೇಡ್ ಯೂನಿಯನ್ ನಾಯಕರಾದ ಶ್ರೀ ಬಿ. ಕೆ. ಶ್ರೀರಾಮಯ್ಯನವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕೆಲಸಗಾರರು ಬೇಡಿಕೆಗಳ ಪ್ರಣಾಳಿಕೆಯಲ್ಲಿ ನಮೂದಿಸಿರುವ ಬೇಡಿಕೆಗಳನ್ನು ಪಡೆಯಲು ಒಂದಾಗಿ ಹೋರಾಟ ನಡೆಸಬೇಕೆಂದು ತಿಳಿಸಿದರು.

ಶ್ರೀಗಳಾದ ಎಸ್. ಸೂರ್ಯನಾರಾಯಣರಾವ್ ಮತ್ತು ಮಾಧವನ್‌ರವರು ಬೇಡಿಕೆಗಳ ಪ್ರಣಾಳಿಕೆಯನ್ನು ಸಭೆಯ ಮುಂದೆ ಮಂಡಿಸಿ, ಅದರ ಬಗ್ಗೆ ವಿವರವನ್ನಿತ್ತರು. ಸಭೆಯು ಪ್ರಣಾಳಿಕೆಯನ್ನು ಕರತಾಡನಗಳಿಂದ ಒಪ್ಪಿತು. ಬೇಡಿಕೆಗಳ ಪ್ರಣಾಳಿಕೆಯನ್ನು ಮೈಸೂರು ರಾಜ್ಯದ ಮುಖ್ಯಮಂತ್ರಿಗಳಿಗೆ ಒಪ್ಪಿಸಲಾಗುವುದೆಂದು ತಿಳಿಸಿದರು.

ವಿಮಾನ ಕಾರ್ಖಾನೆ ನೌಕರರ ಮೇಲೆ ಪೋಲೀಸರು ಗುಂಡು ಹಾರಿಸಿದುದನ್ನು ಖಂಡಿಸಿ, ಈ ಪ್ರಕರಣದ ಬಗ್ಗೆ ವಿಚಾರಣೆ ನಡೆಸಬೇಕೆಂದು ಸರಕಾರವನ್ನು ಒತ್ತಾಯಪಡಿಸುವ ನಿರ್ಣಯವು ಅನುಮೋದಿತವಾಯಿತು. ಪೋಲೀಸು ಕೇಸುಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆನ್ನುವುದನ್ನು ಒತ್ತಾಯಿಸುವ ಇನ್ನೊಂದು ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಬಂದರು ಕೆಲಸಗಾರರ ನಾಯಕ ಡಿಮೆಲ್ಲೋ ಮತ್ತು ಪೋಲಿಸು ಗೋಲೀಬಾರಿಗೆ ತುತ್ತಾಗಿ ಮಡಿದ ಶ್ರೀ. ಪಾಂಡ್ಯನ್‌ಆಚಾರಿ ಇವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಸಭೆ ಅಂಗೀಕರಿಸಿತು.

ಬೇಡಿಕೆಗಳ ಪ್ರಣಾಳಿಕೆಯನ್ನು ಮುಖ್ಯಮಂತ್ರಿಗಳಿಗೆ ಮಾರ್ಚ್ 28 ರಂದು ಸಲ್ಲಿಸಲಾಯಿತು. ಶ್ರೀಗಳಾದ ಟಿ. ಬಿ. ಮಾಧವನ್ (ಎಚ್.ಎಂ.ಎಸ್.), ಕೃಷ್ಣಮೂರ್ತಿ (ಬ್ಯಾಂಕ್ ನೌಕರರ ಸಂಘ), ಎಸ್. ಸೂರ್ಯನಾರಾಯಣರಾವ್ (ಕೆ.ಪಿ.ಟಿ.ಯು.ಸಿ.), ಎಂ. ಬಾಬುರಾವ್ (ಪಿ. ಅಂಡ್ ಟಿ. ಕೆಲಸಗಾರರ ಸಂಘ), ಎ. ಎನ್. ಸಿಂಗ್ (ಕೇಂದ್ರ ಕೈಗಾರಿಕಾ ನೌಕರರ ಸಂಘ) ಇವರುಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದರು. ಕಮ್ಯೂನಿಸ್ಟ್ ಶಾಸನ ಸಭಾ ಸದಸ್ಯರಾದ ಎಂ. ಸಿ. ನರಸಿಂಹನ್‌ರವರು ನಿಯೋಗದೊಂದಿಗೆ ಇದ್ದರು. ಮುಖ್ಯ ಮಂತ್ರಿಗಳು ಪ್ರಣಾಳಿಕೆಯಲ್ಲಿನ ಅಂಶಗಳಿಗೆ ಗಮನಕೊಡುವುದಾಗಿ ಭರವಸೆ ಇತ್ತರು.

ಮಂಗಳೂರು

ಎ.ಐ.ಟಿ.ಯು.ಸಿ. ಎಂ.ಎಸ್.ಯು.ಟಿ.ಯು. ಮತ್ತು ಕೈಗಾರಿಕಾ ಫೆಡರೇಶನ್‌ಗಳ ಮುಂದಾಳುಗಳು ಒಟ್ಟಿಗೆ ಸಭೆ ಸೇರಿ 14 ಕೇಳಿಕೆಗಳನ್ನು ಸರಕಾರದ ಮುಂದಿಡಲು ನಿರ್ಣಯಿಸಿರುವರು. ಈ ಕೇಳಿಕೆಗಳನ್ನು ಸರಕಾರ ಒಪ್ಪುವಂತೆ ಒತ್ತಾಯಿಸುವುಕ್ಕಾಗಿ ತಾ|| 27-3-58 ರಂದು ಕೇಳಿಕೆ ದಿನ ಆಚರಿಸಬೇಕೆಂದು ದೇಶದ ಎಲ್ಲಾ ಟ್ರೇಡ್ ಯೂನಿಯನ್‌ಗಳಿಗೆ ಕರೆ ಕೊಟ್ಟಿದೆ. ಈ ಕರೆಯಂತೆ ಮಂಗಳೂರಿನ ಎಸ್. ಕೆ.ಟಿ.ಯು.ಸಿ., ಎಚ್. ಎಂ. ಎಸ್. ಮತ್ತು ಪಿ. ಎಂ. ಟಿ. ಎಂಪ್ಲೊಯಿಸ್ ಫೆಡರೇಶನ್‌ಗಳ ಪರವಾಗಿ ಶ್ರೀಯುತರುಗಳಾದ ಬಿ. ಎಸ್ ಭಾಸ್ಕರ ರೈ, ಕೆ. ಮೋನಪ್ಪ ಶೆಟ್ಟಿ, ಡಿ. ಮೋಹನರಾವ್, ಎಂ. ಮಹಾಬಲ ರೈ ಮತ್ತು ಎ. ಆಚಾರ್ ಸಹಿ ಮಾಡಿರುವ ಮನವಿಯೊಂದನ್ನು ತಾರೀಖು 27—3—58ರಂದು ಬೆಳಗ್ಗೆ 10 ಘಂಟೆಗೆ ಜಿಲ್ಲಾ ಡಿಪ್ಯುಟಿ ಕಮಿಶನರರಿಗೆ ಅವರ ಬಂಗಲೆಯಲ್ಲಿ ಒಪ್ಪಿಸಲಾಯಿತು. ಅಲ್ಲದೆ ಕೇಂದ್ರದ ಮಜೂರ ಮಂತ್ರಿಗಳಿಗೂ ಒಂದು ತಂತಿಯನ್ನು ಕಳುಹಿಸಲಾಗಿದೆ.

ಸಂಜೆ 5-30ಕ್ಕೆ ಬೋಳಾರ ಮುಳಿದಿತ್ಲು ಮೈದಾನಿನಲ್ಲಿ ಎಸ್.ಕೆ.ಟಿ.ಯು.ಸಿ.ಯ ಆಶ್ರಯದಲ್ಲಿ ಶ್ರೀ ಬಿ ವಿಶ್ವನಾಥರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಪ್ರಾರಂಭದಲ್ಲಿ ಶ್ರೀ ಬಿ. ನಾರಾಯಣರು ಸ್ವಾಗತಿಸಿದರು. ದೇಶದ ಮಜೂರರ ಕೇಂದ್ರ ಸಂಸ್ಥೆಗಳು ಸರಕಾರದ ಮುಂದಿಟ್ಟಿರುವ 14 ಕೇಳಿಕೆಗಳ ಮಹತ್ವವನ್ನು ವಿವರಿಸಿ ಶ್ರೀಯುತರುಗಳಾದ ಎಚ್. ಉಮಾನಾಥ ನ್ಯಾರ್, ಕೆ. ಮೋನಪ್ಪ ಶೆಟ್ಟಿ, ಯು. ಕೃಷ್ಣ, ಬಿ. ಚಂದ್ರಶೇಖರ ಮತ್ತು ಬಿ. ಚೆನ್ನಯ್ಯ ಇವರುಗಳು ಭಾಷಣ ಮಾಡಿದರು.

ಬೆಳಗಾಂ—

ಪ್ರತಿಭಟನಾ ಸಭೆ

ಬೆಳಗಾಂ ಜಿಲ್ಲೆಯ ಸಂಸುದ್ಧಿ ಗ್ರಾಮದಲ್ಲಿ 21—3—58ರಂದು ಕಮ್ಯೂನಿಸ್ಟ್ ಪಾರ್ಟಿ ವತಿಯಿಂದ ರೈತರ ಜಾಹೀರ ಸಭೆ ನಡೆಯಿತು. ಈ ಸಭೆಗೆ ನಿಂಗಾಡಾ ಲಖಗೌಡಾ ಪಾಟೀಲರವರು ಅಧ್ಯಕ್ಷತೆ ವಹಿಸಿದ್ದರು. ಕಾಮ್ರೇಡ್ ಮಾರುತಿ ಪೂಜಾರಿಯವರು ಜತ್ತಿ ಸಮಿತಿಯ ವರದಿ ಬಗ್ಗೆ ಮಾತಾಡಿ, ರೈತ ಸಂಘಟನೆಯ ಆವಶ್ಯಕತೆ ಬಗ್ಗೆ ವಿವರಿಸಿದರು. ಸಭೆಯಲ್ಲಿ ಕೆಳಗಿನ ಠರಾವುಗಳನ್ನು ಮಾಡಲಾಗಿದೆ.

1. ಕರ್ನಾಟಕ ಪ್ರಾಂತೀಯ ರೈತ ಸಂಘದ ಸೂಚನೆಯಂತೆ ಪ್ರಗತಿ ಪರವಾದ ಭೂಸುಧಾರಣೆಯನ್ನು ಕೂಡಲೇ ಮೈಸೂರು ಸರಕಾರ ಜಾರಿಗೆ ತರಬೇಕು.

2. ರಾಯಬಾಗ ಮಹಾಲದಲ್ಲಿ 10 ಸಾವಿರ ಎಕರೆ ಜಮೀನನ್ನು ಜಂಗಲಗೆ ಮೀಸಲಾಗಿಡುವ ಯೋಜನೆಯನ್ನು ಸರಕಾರ ರದ್ದು ಮಾಡಬೇಕು. ಮತ್ತು ಈ ಮೊದಲು 1½ ಸಾವಿರ ಎಕರೆ ಜಮೀನನ್ನು ಬೇಸಾಯ ಸಂಘಗಳಿಗೆ ಕೊಟ್ಟಂತೆ ಉಳಿದ 8½ ಸಾವಿರ ಜಮೀನನ್ನು ಸಹ ಭೂಮಿಹೀನ ಜನರಿಗೆ ಬೇಸಾಯ ಮಾಡಲು ಕೊಡಬೇಕು.

3. ಊರಿನ ಸೊಸಾಯಟಿಯಲ್ಲಿ ಹಿಂದಿನ ಛೇರ್‌ಮನ್‌ರ ಕಾಲದಲ್ಲಿ ರೂ. 4,000 ದುರುಪಯೋಗವಾಗಿದೆಂದು ಹೊಸ ಛೇರ್‌ಮನ್‌ರವರ ವರದಿಯಲ್ಲೂ, ರಾಯಬಾಗದ ಬ್ಯಾಂಕಿನ ಇನ್‌ಸ್ಪೆಕ್ಟರ್ ಅವರ ವರದಿಯಲ್ಲೂ ಕಂಡು ಬಂದಿದೆ. ಇದರ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳಲು ವಿಳಂಬ ಮಾಡುವುದು ಖಂಡನೀಯವಾಗಿದೆ. ಇದು ಮುಂದುವರಿದರೆ ಈ ಸೊಸಾಯಿಟಿ "ಸಿ" ವರ್ಗಕ್ಕೆ ಬಿದ್ದು ರೈತರಿಗೆ ಬಹಳ ತೊಂದರೆಯಾಗಲಿದೆ. ಆದಕಾರಣ ಹಣ ದುರುಪಯೋಗ ಮಾಡಿದ ಜನರ ಮೇಲೆ ಸರಕಾರ ಕೂಡಲೇ ಕ್ರಮ ತೆಗೆದುಕೊಂಡು ಸೊಸಾಯಿಟಿಗೆ ಹೊಸ ಕಮಿಟಿಯನ್ನು ರಚಿಸಿ ವ್ಯವಹಾರ ನಡಿಸುವಂತೆ ಮಾಡಬೇಕೆಂದು ವಿನಂತಿಸುತ್ತದೆ.

ಬೆಂಗಳೂರು—

ಭಾರತ-ರಷ್ಯಾ ಸಾಂಸ್ಕೃತಿಕ ಸಂಘದ ಸರ್ವಸದಸ್ಯರ ಸಭೆ

ಬೆಂಗಳೂರಿನ ಭಾರತ ರಷ್ಯಾ ಸಾಂಸ್ಕೃತಿಕ ಸಂಘದ ಸರ್ವಸದಸ್ಯರ ಸಭೆಯು ಮಾರ್ಚ್ 30ರಂದು ಬೆಳಗ್ಗೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ವಿ. ಕೃಷ್ಣಮೂರ್ತಿಯವರು ಅಧ್ಯಕ್ಷತೆವಹಿಸಿದ್ದರು.

ಸಭೆಯು ಮೌಲಾನಾ ಅಜಾದ್ ಮತ್ತು ಮಹಾಕವಿ ವಲ್ಲತ್ತೋಳ್ ಅವರುಗಳ ನಿಧನಕ್ಕೆ ಸಂತಾಪವನ್ನು ಸೂಚಿಸಿ ಎರಡು ನಿಮಿಷ ಮೌನವನ್ನಾಚರಿಸಿತು.

ಸಂಘದ ಚಟುವಟಿಕೆಯನ್ನು ಕುರಿತು ಕಾರ್ಯದರ್ಶಿಗಳಾದ ಶ್ರೀ ಸಿ. ಆರ್. ಕೃಷ್ಣರಾವ್ ಅವರು ಒಪ್ಪಿಸಿದ ವರದಿಯನ್ನು ಸಭೆ ಅಂಗೀಕರಿಸಿತು.

ಭಾರತ-ರಷ್ಯಾ ಸಾಂಸ್ಕೃತಿಕ ಸಂಘದ ನಾಲ್ಕನೇ ರಾಷ್ಟ್ರೀಯ ಸಮ್ಮೇಳನವನ್ನು ಬೆಂಗಳೂರು ನಗರದಲ್ಲಿ ನಡೆಸಬೇಕೆನ್ನುವ ತೀರ್ಮಾನವನ್ನು ಸ್ವಾಗತಿಸುವ ನಿರ್ಣಯವನ್ನು ಸಭೆಯ ಮುಂದೆ ಶ್ರೀ ಸಿದ್ದರಾಮಣ್ಣನವರು ಮಂಡಿಸಿದರು. ಶೀಘ್ರದಲ್ಲೇ ಶಾಖೆಯ ಸಮ್ಮೇಳನವನ್ನು ನಡೆಸುವ ಸಂಬಂಧದಲ್ಲಿ ಕಾರ್ಯಕ್ರಮವನ್ನು ನಿರೂಪಿಸಲು ಸಮಿತಿ 12ಮಂದಿ ನೂತನ ಸದಸ್ಯರನ್ನು ಸಭೆಯು ಕೋಆಪ್ಟ್‌ಮಾಡಿತು.

ಸಂಘದ ಉಪಾಧ್ಯಕ್ಷರಾದ ಶ್ರೀ ಎಂ. ಪಿ.ಎಚ್. ಸಿದಿಕ್ಕಿಯವರು ವಂದನಾರ್ಪಣೆ ಮಾಡಿದರು.

ರೈತರಂಗ

ಪೆರ್ಮನ್ನೂರು ಪಂಚಾಯತು ಬೋರ್ಡು ಚುನಾವಣೆ

ರೈತಸಂಘದ ವಿಜಯ

ತಾ|| 22-3-58 ರಂದು ಪೆರ್ಮನ್ನೂರು ಗ್ರಾಮದ ಪಂಚಾಯತ್ ಬೋರ್ಡಿನ ಚುನಾವಣೆಯು ಜರಗಿ ರೈತಸಂಘದ ಪರವಾಗಿ ಉಮೇದುವಾರರಾಗಿ ನಿಂತಿದ್ದ ಅಧ್ಯಕ್ಷ ಮತ್ತು ಆರು ಮಂದಿ ಸದಸ್ಯರೂ ಅವಿರೋಧವಾಗಿ ಆರಿಸಿ ಬಂದರು.

ಅಧ್ಯಕ್ಷ ಸ್ಥಾನಕ್ಕೆ ಶ್ರೀ ಯು. ಚಂದ್ರಪ್ಪನವರೂ, ಸದಸ್ಯ ಸ್ಥಾನಗಳಿಗೆ ಶ್ರೀಗಳಾದ ಯು. ಮಂಜಪ್ಪ ಮೇಸ್ತ್ರಿ, ಡಿ. ಪೂವಣಿ ಪಂಡಿತ, ಯು. ಕೃಷ್ಣಪ್ಪ, ಲಾದಿನ್ ಡಿ'ಸೋಜ, ಪಿ. ಅಲೆಕ್ಸ್ ಮೊಂತೇರೊ, ಪಿ. ಕೆ. ಮಹ್ಮದ್ ಇವರೂ ಉಮೇದ್ವಾರರಾಗಿ ನಿಂತಿದ್ದರು. ಯಾರೂ ಪ್ರತಿ ಸ್ಪರ್ಧಿಗಳಿಲ್ಲದ ಕಾರಣ ಇವರೆಲ್ಲರೂ ಅವಿರೋಧವಾಗಿ ಆರಿಸಿ ಬಂದರು. ಚುನಾವಣೆಯಲ್ಲಿ ಭಾಗವಹಿಸಲು ಸುಮಾರು 500ಕ್ಕೂ ಮಿಕ್ಕಿ ಮತದಾರರು ಬಂದಿದ್ದರು.

ರೈತ ಸಂಘದ ಉಮೇದ್ವಾರರು ಅವಿರೋಧವಾಗಿ ಆರಿಸಿದ್ದಕ್ಕಾಗಿ ಕೋಟೆಕಾರು ಸರ್ಕಲ್ ರೈತಸಂಘದ ಕಾರ್ಯದರ್ಶಿ ಶ್ರೀ ಬಿ. ಕೊರಗಪ್ಪ ರೈಯವರು ಮತದಾರರಿಗೆ ಧನ್ಯವಾದಗಳನ್ನರ್ಪಿಸಿದ್ದಾರೆ.

ಆರಿಸಿ ಬಂದ ಅಧ್ಯಕ್ಷರಿಗೂ, ಸದಸ್ಯರಿಗೂ ನಮ್ಮ ಅಭಿನಂದನೆಗಳು.

ದೊಡ್ಡಬಳ್ಳಾಪುರ—

ತಾಲ್ಲೂಕು ರೈತಸಂಘದ ಸಭೆ

ಭಾನುವಾರ 30—3—1958 ನೇ ಮಧ್ಯಾಹ್ನ 3 ಘಂಟೆಗೆ ದೊಡ್ಡಬಳ್ಳಾಪುರದ ತಾಲ್ಲೂಕು ತೂಬುಗೆರೆ ಹೋಬಳಿ ಗಂಟಿಗಾನ ಹಳ್ಳಿ ಪಂಚಾಯಿತಿ ಹಾಲಿನಲ್ಲಿ ಸರ್ಕಲ್ ರೈತಸಂಘದ ಸರ್ವ ಸದಸ್ಯರ ಸಭೆ ನಡೆಯಿತು.

ತಾಲ್ಲೂಕು ರೈತ ಸಂಘದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಎನ್. ಹೆಚ್. ಬೈರಹನುಮೇಗೌಡರು ಅಧ್ಯಕ್ಷತೆ ವಹಿಸಿದ್ದರು.

ಗಂಟಿಗಾನಹಳ್ಳಿ ಮಲ್ಟಿ ಪರ್ ಪಸ್ ಕೋಆಪರೇಟೀವ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಮಾರಳ್ಳಿ ಹೊನ್ನೂರಪ್ಪನವರು ಸಂಘದ ಹೆಸರಿನಲ್ಲಿ, ಒಣ ಮೆಣಸಿನಕಾಯಿ ಎಕ್ಸ್‌ಪೋರ್ಟು ಪರ್ಮಿಟ್ ಪಡೆದು ಅರಿಯದ ರೈತರಿಂದ ಸುಳ್ಳು ಓಚರ್‌ಗಳನ್ನು ಬರೆಯಿಸಿಕೊಂಡು ಸಂಘಕ್ಕೂ, ಸರಕಾರಕ್ಕೂ ವಂಚನೆ ಮಾಡಿರುವುದನ್ನು. ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಾಗ್ಯೂ ಅಧಿಕಾರಿಗಳು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ ಪುನಃ ಮೆಣಸಿನಕಾಯಿ, ಈರುಳ್ಳಿ, ಪರ್ಮಿಟ್ಟನ್ನು ಕೊಟ್ಟು ದುರ್ವ್ಯಾಪಾರಕ್ಕೆ ಉತ್ತೇಜನ ಕೊಟ್ಟಿರುವುದನ್ನ ಸಭೆಯು ತೀವ್ರವಾಗಿ ಖಂಡಿಸಿತು.

ಬೀಡಿಕೆರೆ ಕೋಡಿ ಉತಾವಣೆ ಆಗದೆಯಿರುವುದರಿಂದ ಈ ಕೆರೆಯ ಅಚ್ಚುಕಟ್ಟು ದಾರರ ಜಮೀನುಗಳಿಗೆ ವರ್ಷ, ವರ್ಷವೂ ಸಾಕಷ್ಟು ನೀರು ಸಿಗದಂತಾಗಿ ಬೆಳೆಗಳು ಪೂರೈಸದಂತಾಗಿ ರೈತರು ನಷ್ಟ ಹೊಂದುತ್ತಾ ಬಂದಿರುವ ವಿಚಾರ ಸರ್ಕಾರಕ್ಕೆ ತಿಳಿದಂತ ವಿಚಾರವೇ ಆಗಿರುತ್ತದೆ. ಈ ಕೆರೆ ಕೋಡಿ ಉತಾವಣೆ ಮಾಡಿಸಿ ಕೊಟ್ಟು, ರೈತರ ಕಷ್ಟವನ್ನು ಪಾರು ಮಾಡಬೇಕೆಂದು ಅನೇಕ ವರ್ಷಗಳಿಂದ ಸರಕಾರವನ್ನು ಪ್ರಾರ್ಥಿಸಿಕೊಂಡಾಗ್ಯು ಇದಕ್ಕೆ ಗಮನ ಕೊಡದ ಸರ್ಕಾರದ ವಿಚಾರದಲ್ಲಿ ಸಭೆಯು ತುಂಬಾ ವಿಷಾದ ವ್ಯಕ್ತಪಡಿಸಿತು.

ತೂಬುಗೆರೆ ಹೋಬಳಿಯ ಬೇರೆ ಎಲ್ಲಾ ಗ್ರಾಮಗಳಲ್ಲೂ ಆದಷ್ಟು ಜಾಗ್ರತೆ ರೈತ ಸಂಘಕ್ಕೆ ಸದಸ್ಯರುಗಳನ್ನು ಕೂಡಿಸಿ ಎರಡನೇ ಸರ್ಕಲ್ ಕಮಿಟಿಯನ್ನು ಏರ್ಪಾಡು ಮಾಡತಕ್ಕದ್ದೆಂದು ಈ ಸಭೆಯು ನಿರ್ಣಯಿಸಿತು.

ನಂತರ ಸಭೆಯು ಜಿ. ನಾರಾಯಣ ಸ್ವಾಮಪ್ಪನವರನ್ನು ಅಧ್ಯಕ್ಷರಾಗಿಯು, ದೊಡ್ಡ ಹನುಮಪ್ಪನವರನ್ನು ಉಪಾಧ್ಯಕ್ಷರಾಗಿಯೂ ಕೆ. ಆರ್. ರಾಮಾಂಜನಪ್ಪನವರನ್ನು ಕಾರ್ಯದರ್ಶಿಯಾಗಿಯೂ ಉಳ್ಳ 20 ಮಂದಿಯ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಿತು.

ಓದುಗರ ಓಲೆ

ದೊಡ್ಡಬಳ್ಳಾಪುರ—

ಪುರಸಭಾಧ್ಯಕ್ಷರ ನಿರಂಕುಶ ನಡವಳಿಕೆ

ದೊಡ್ಡಬಳ್ಳಾಪುರದ ಮುನಿಸಿಪಲ್ ಅಧ್ಯಕ್ಷರು, ಸರ್ಕಾರಿ ಆರ್ಡರುಗಳಿಗೆ ಎಳ್ಳಷ್ಟು ಬೆಲೆ ಕೊಡದೆ ಸ್ವೇಚ್ಛಾನುವರ್ತಿಗಳಾಗಿ ಮನಬಂದಂತೆ ನಡೆದುಕೊಳ್ಳುತ್ತಿದ್ದಾಗ್ಯೂ ಸರಕಾರ ಉದಾಸೀನವಾಗಿರುವುದನ್ನು ನೋಡಿದರೆ ಪರಮಾಶ್ಚರ್ಯವಾಗುತ್ತದೆ. ಈ ಊರಿಗೆ ಚೀಫ್ ಆಫೀಸರು ಶ್ರೀ ಸಯದ್ ಜಾಫ್‌ರವರು ಬಂದು ಈಗ್ಗೆ ನಾಲ್ಕು ವರ್ಷಗಳಾದವು. ಇವರು ಬರುವುದಕ್ಕೆ ಮೊದಲು ಪೌರ ಸಭೆಯ ಕಾರ್ಯಕಲಾಲಪಗಳು ಸುಸೂತ್ರವಾಗಿದ್ದು ಊರು ನೆಮ್ಮದಿಯಾಗಿತ್ತು. ಇವರು ಬಂದಿದ್ದೇ ತಡ, ಊರಿನ ರಾಜಕೀಯಕ್ಕೆ ಕೈಹಾಕಿ, ಪಾರ್ಟಿಗಳನ್ನು ಕಟ್ಟಿ, ಊರಿನ ಶಾಂತ ವಾತಾವರಣ ಕದಡಿ ಜನಗಳಿಗೆ ಕಿರುಕುಳ ಜಾಸ್ತಿಯಾಯಿತು ಈ ಮಹನೀಯರ ನಡತೆಯ ಬಗ್ಗೆ ಕ್ರಿಮಿನಲ್ ಮೊಕದ್ದಮೆಯೊಂದರ ತೀರ್ಪಿನಲ್ಲಿ, ಈ ಊರಿನ ಮಾನ್ಯ ಮುನಿಸೀಫ್ ಮ್ಯಾಜಿಸ್ಟ್ರೇಟರವರು ಬರೆದಿರುವ ಸ್ಟ್ರಿಕ್ಚರ್‌ವೊಂದೇ ಸಾಕು ಇವರ ಯೋಗ್ಯತೆಗೆ. ನಮ್ಮೂರು ಅಧ್ಯಕ್ಷರ ರಾಜಕೀಯ ಬೆಂಬಲಿಗರಾದ ಇವರು ಚೀಫ್ ಆಫೀಸರವರು. ಅಧ್ಯಕ್ಷರ ಬಲದಿಂದ ಅನೇಕ ಬಾರಿ ಟ್ರಾನ್ಸ್‌ಫರ್ ಆರ್ಡರ್ ಬಂದಾಗ್ಯೂ ನಿರ್ಲಕ್ಷಿಸಿ ಚಾರ್ಜು ಕೊಡದೆ, ದೊಡ್ಡಬಳ್ಳಾಪುರವನ್ನೇ ಕಾಯಂ ಮಾಡಿಕೊಂಡಿರುತ್ತಾರೆ.

ಈ ಬಾರಿ, 1957ನೇ ಡಿಸೆಂಬರ್ ತಿಂಗಳಿನಲ್ಲಿ ಡಿವಿಜನಲ್ ಕಮಿಷನರ್‌ವರು ಮಾಡಿದ್ದ ಟ್ರಾನ್ಸ್‌ಫರ್ ಒಂದು ತಿಂಗಳ ಸಸ್ಪೆನ್ಶನ್‌ನಲ್ಲಿ ಇಡಿಸಿದರು. ಮತ್ತೆ ಜನವರಿಯಲ್ಲಿ ಕೂಡಲೇ ಚಾರ್ಜು ಕೊಟ್ಟು ಹೊರಡಬೇಕೆಂದು ಕೊಟ್ಟ ಆರ್ಡರನ್ನ ಕಸದ ಬುಟ್ಟಿಗೆ ಹಾಕಿದರು. ಅದೇ ಡಿವಿಜನಲ್ ಕಮಿಶನರ್ ಈಗ್ಗೆ ಸುಮಾರು 20 ದಿನಗಳ ಹಿಂದೆ ತಕ್ಷಣ ಚೀಫ್ ಆಫೀಸರು ಶ್ರೀ ಸಯದ್ ಜಾಫರ್ ಅವರನ್ನು ರಿಲೀವ್ ಮಾಡಬೇಕು, ತಪ್ಪಿದರೆ ಇವರನ್ನು ಸಸ್ಪೆನ್ಶನಲ್ಲಿಟ್ಟು ಸಂಬಳ ನಿಲ್ಲಿಸಬೇಕಾಗುತ್ತದೆಂದು ರಿಜಿಸ್ಟರ್ ಪೋಸ್ಟು ಮುಖಾಂತರ ಅಧ್ಯಕ್ಷರಿಗೆ ಕಳಿಸಿಕೊಟ್ಟ ಆರ್ಡರಿಗೂ ಮನ್ನಣೆ ದೊರೆಯಲಿಲ್ಲ.

ಈ ಛೀಫ್ ಆಫೀಸರಿಗೆ ಡಿವಿಜನಲ್ ಕಮೀಶನರವರನ್ನು ಉಲ್ಲಂಘಿಸಿ ನಡೆಯುವಷ್ಟು ಬೆಂಬಲ ಕೊಟ್ಟಿರುವ ನಮ್ಮ ಸರ್ವಾಧಿಕಾರಿ ಮುನಿಸಿಪಲ್ ಅಧ್ಯಕ್ಷರು ಈ ಛೀಫ್ ಆಫೀಸರು ಹೋಗಬೇಕಾಗಿದ್ದ ಚಳ್ಳಕೆರೆ ಪುರಾಧ್ಯಕ್ಷರಿಗೆ ಒಂದು D. O. ಲೆಟರು ಬರೆದು ಅದರಲ್ಲಿ ನೀವು ಅಲ್ಲಿನ ಛೀಫ್ ಆಫೀಸರನ್ನು ರಿಲೀವ್ ಮಾಡಬೇಡಿ. ಸ್ಥಳಿಯ ಸಚಿವರ ಆರ್ಡರನ್ನು ಎದುರು ನೋಡುತ್ತಾ ಇದ್ದೇನೆ. ಡಿ. ಸಿ.ಯವರ ಆರ್ಡರನ್ನಾಗಲಿ ಡಿವಿಜನಲ್ ಕಮಿಶನರವರ ಆರ್ಡರನ್ನಾಗಲಿ ನಾನು ನಡೆಸ ತಕ್ಕವನಲ್ಲವೆಂದು ನಮೂದಿಸಿರುವರೆಂಬ ವಿಚಾರ ಚಿಂತಾಜನಕವಾಗಿದೆ. ಪಾಪ! ಮಾತೆತ್ತಿದರೆ ನಮ್ಮ ಅಧ್ಯಕ್ಷರು ಮಂತ್ರಿಗಳ ಮನೆಯಿಂದ ಹುಕುಂ ಕಳಿಹಿಸುವಂತಾಗಿದೆ. ಈ ದೊಡ್ಡ ಅಧಿಕಾರಿಗಳು ಮಾಡುವುದೇನು? ಇವರ ದುಸ್ಥಿತಿಯ ಬಗ್ಗೆ ಕನಿಕರ ಪಡಬೇಕಷ್ಟೆ. ಇದೇ ಪುರಸಭಾಧ್ಯಕ್ಷರ ದುರಾಗ್ರಹಕ್ಕೆ ಬಲಿಯಾಗಿರುವ ಪುರಪ್ರೌಢಶಾಲೆಯ ಹಿಂದೀ ಅಧ್ಯಾಪಕ ಶ್ರೀ ಗೋಪಾಲ ಭಟ್ಟರ ಸ್ಥಿತಿಯು ಶೋಚನಿಯವಾಗಿದೆ. ಇವರ ಬಗ್ಗೆ ವಿದ್ಯಾ ಇಲಾಖೆಯ ಉನ್ನತಾಧಿಕಾರಿಗಳೂ, ಹೈಸ್ಕೂಲು ಕಮಿಟಿಯ ಅಧ್ಯಕ್ಷರಿಂದ ಡೆಪ್ಯುಟಿ ಕಮೀಷನ್‌ರವರೂ, ಇವರುಗಳ ಆರ್ಡರುಗಳಿಗೆ ನಮ್ಮ ಅಧ್ಯಕ್ಷರು ಆರ್ಡರು ಕೊಡಲಿಲ್ಲ. ವಿದ್ಯಾಸಚಿವರವರೆವಿಗೂ ಅನೇಕ ದೂರುಗಳು ಈ ಬಗ್ಗೆ ಹೋದಾಗ್ಯೂ ಅವರೂ ಮೌನವಾಗಿದ್ದಾರೆ. ಈ ನಡವಳಿಕೆಗಳು ಸರ್ಕಾರದ ಮೇಲೆ ಎಂಥಹ ದುಷ್ಪರಿಣಾಮ ಬೀರಲಿವೆಯೆಂಬ ಅರಿವೇ ನಮ್ಮ ಕಾಂಗ್ರೆಸ್ ನಾಯಕರಿಗಿಲ್ಲವಾಗಿದೆ. ಸರ್ಕಾರದ ಬಗ್ಗೆ ಜನತೆಗೆ ತಾತ್ಸಾರ ಹುಟ್ಟಲು ಇದಕ್ಕಿಂತ ಮತ್ತೇನು ಬೇಕು. ದಿನಚರಿ, ಸಾಮಾನ್ಯ ವಿಷಯಗಳಲ್ಲಿ ಮಂತ್ರಿಗಳು ಪ್ರವೇಶಿಸಿದರೆ ಅಧಿಕಾರಿಗಳಿಗೆ ನಿರ್ವಂಚನೆಯಿಂದ ಸೇವೆ ಸಲ್ಲಿಸಲು ಬಂದೀತೆ? ಈಗಾಗಲೇ ಸರ್ಕಾರ ತನ್ನ ಘನತೆಯನ್ನು ಕಳೆದುಕೊಳ್ಳುತ್ತಾ ಬಂದಿದೆ. ಪರಿಸ್ಥಿತಿ ಹೀಗೆ ಮುಂದುವರಿದಲ್ಲಿ ಅಡಳಿತ ಕುಸಿದು ಬಿದ್ದೀತು. ನಮ್ಮ ಮಾನ್ಯ ಮುಖಂಡರು ಎಚ್ಚೆತ್ತುಕೊಳ್ಳುವುದು ಲೇಸು.

"ಓರ್ವ ಪೌರಸಭಾ ಸದಸ್ಯ"

ಪೆರಿಯಾಪಟ್ಟಣದ ಕ್ಷೇತ್ರದಲ್ಲಿ ಬಿರುಸಿನ ಚುನಾವಣಾ ಪ್ರಚಾರ

ಕಮ್ಯೂನಿಸ್ಟ್ ಉಮೇದುವಾರರನ್ನು ಗೆಲ್ಲಿಸಲು ಉಪಾಧ್ಯಾಯರ ಕರೆ

(೩ನೇ ಪುಟದಿಂದ)

ಏಪ್ರಿಲ್ 13ರಂದು ಪೆರಿಯಾಪಟ್ಟಣ ಕ್ಷೇತ್ರದಿಂದ ಮೈಸೂರು ಶಾಸನ ಸಭೆಗೆ ನಡೆಯಲಿರುವ ಉಪ ಚುನಾವಣೆಗೆ ಬಿರುಸಾದ ಪ್ರಚಾರ ನಡೆದಿದೆ. ಈ ಕ್ಷೇತ್ರದಲ್ಲಿ ಕೊಡಗಿನ ಅಮ್ಮತ್ತಿ, ಸಿದ್ದಾಪುರ ಮತ್ತು ಕುಶಾಲ ನಗರ ಪ್ರದೇಶಗಳೂ, ಪೆರಿಯಾಪಟ್ಣ ತಾಲ್ಲೂಕಿನ ಪೆರಿಯಾಪಟ್ಣ, ಬೆಟ್ಟದಪುರ ಮುಂತಾದ ಭಾಗಗಳೂ ಸೇರಿವೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾದ ಶ್ರೀ ಸೋಮಣ್ಣನವರು ಈ ಕ್ಷೇತ್ರದಿಂದ ಆರಿಸಿ ಬಂದಿದ್ದು, ಅವರು ಮೃತರಾದುದರಿಂದ ಈಗ ಉಪ ಚುನಾವಣೆ ನಡೆದಿದೆ. ಕಮ್ಯೂನಿಸ್ಟ್ ಪಾರ್ಟಿಯು ಈ ಸಲ ಮೊದಲ ಬಾರಿಗೆ ಈ ಕ್ಷೇತ್ರದಿಂದ ಸ್ಪರ್ಧಿಸುತ್ತಿದೆ. ಕೊಡಗಿನ ಕಮ್ಯೂನಿಸ್ಟ್ ಮತ್ತು ಕಾರ್ಮಿಕ ನಾಯಕರಾದ ಕಾಮ್ರೇಡ್ ಬಿ. ಎನ್. ಕುಟ್ಟಪ್ಪನವರನ್ನು ತನ್ನ ಉಮೇದುವಾರರನ್ನಾಗಿ ಕಮ್ಯೂನಿಸ್ಟ್ ಪಾರ್ಟಿಯು ನಿಲ್ಲಿಸಿದೆ. ಪಾರ್ಟಿಯ ಪ್ರಚಾರವು ಬಿರುಸಾಗಿ ನಡೆದಿದೆ.

ಕಮ್ಯೂನಿಸ್ಟ್ ಪಾರ್ಟಿಗೆ ಹೆಚ್ಚಿನ ಜನಬೆಂಬಲ ದೊರೆಯುವುದನ್ನು ನೋಡಿ ಕಾಂಗ್ರೆಸ್ಸಿಗರು ಕೀಳುಮಟ್ಟದ ಅಪಪ್ರಚಾರಕ್ಕೆ ಇಳಿದಿದ್ದಾರೆ. ಶ್ರೀ ಚನ್ನಬಸಪ್ಪನವರು ಕಾಂಗ್ರೆಸ್ ಪ್ರಚಾರ ಸಭೆಗಳಲ್ಲಿ ಮಾತಾಡುತ್ತಾ ಕಾಂಗ್ರೆಸ್ ದೇಶಕ್ಕೆ ಸ್ವಾತಂತ್ರ್ಯತಂದಿದೆ ಎಂದೂ, ಕಮ್ಯೂನಿಸ್ಟರು ಅದನ್ನು ವಿರೋಧಿಸಿದ್ದರೆಂದೂ, ಕಮ್ಯೂನಿಸ್ಟರು ಹಿಂಸೆ ಮತ್ತು ಕೊಲೆ ಮಾಡುತ್ತಾರೆಂದೂ, ಎಲ್ಲರ ಆಸ್ತಿಗಳನ್ನು ಕಸಕೊಳ್ಳುತ್ತಾರೆಂದೂ, ಚೈನಾ ಮತ್ತು ರಷ್ಯಾಗಳಲ್ಲಿ ಲಕ್ಷಾಂತರ ಜನರನ್ನು ಕೊಂದಿದ್ದಾರೆಂದೂ ಹೇಳುತ್ತಿದ್ದಾರೆ. ಪೆರಿಯಾಪಟ್ಣದ ಜನತೆಗೆ ಶ್ರೀ ಚನ್ನಪ್ಪನವರ ಪರಿಚಯು ಚೆನ್ನಾಗಿದೆ. ಊರಲ್ಲಿ ಸಹಸ್ರಾರು ಜನರಿಗೆ ಒಂದಂಗುಲ ಭೂಮಿಯೂ ಇಲ್ಲದಿರುವಾಗ ಸುಮಾರು 300 ಎಕ್ರೆ ಜಮೀನನ್ನು ತಾವೇ ಪಡಕೊಂಡವರು ಮಾಜಿ ಮಂತ್ರಿ ಶ್ರೀ. ಚನ್ನಬಸಪ್ಪನವರು.. ಭೂಸುಧಾರಣೆಯ ಬಗ್ಗೆ ಮೈಸೂರು ಸರಕಾರ ತಂದಿರುವ ಜತ್ತಿ ಸಮಿತಿಯ ಶಿಫಾರ್ಸುಗಳನ್ನು ಸಹ ತೀವ್ರವಾಗಿ ವಿರೋಧಿಸಿ ಜಮೀನ್ದಾರರುಗಳ ವಾದಗಳನ್ನು ಮುಂದಿಟ್ಟವರು ಇದೇ ಚನ್ನಬಸಪ್ಪನವರು. ಪೆರಿಯಾಪಟ್ಣ ತಾಲೂಕಿನಲ್ಲಿ ನೀರಾವರಿ ಯೋಜನೆಗಳನ್ನು ಕಡೆಗಣಿಸಿ ತಮ್ಮ ಜಮೀನಿಗಷ್ಟೇ ನೀರಿನ ವ್ಯವಸ್ಥೆ ಮಾಡಿಕೊಂಡು ಉತ್ತಮ ಬೆಳೆ ಬೆಳೆಸುವ ಅನುಕೂಲತೆ ಮಾಡಿಕೊಂಡಿರುವವರು ಶ್ರೀ ಚನ್ನಬಸಪ್ಪನವರು. ತಮ್ಮ ಬಂಗಲೆಗೆ ಉತ್ತಮವಾದ ಟಾರು ರಸ್ತೆಯನ್ನು ಮಾಡಿಕೊಂಡು, ವಿದ್ಯುತ್ ಸರಬರಾಜನ್ನೂ ಮಾಡಿಕೊಂಡು ತಾಲೂಕಿನ ಜನತೆಯನ್ನು ಕಡೆಗಾಣಿಸಿರುತ್ತಾರೆ ಶ್ರೀ ಚನ್ನಬಸಪ್ಪನವರು. ಅವರ ವಿಷಯ ಚೆನ್ನಾಗಿ ತಿಳಿದಿರುವ ತಾಲ್ಲೂಕಿನ ಜನತೆ ಅವರ ಮಾತಿಗೆ ಬಲಿ ಬೀಳಲು ನಿರಾಕರಿಸಿದ್ದಾರೆ.

ಭಾರತಕ್ಕೂ ಚೈನಾಕ್ಕೂ ನಡುವೆ ಸ್ನೇಹ ಒಪ್ಪಂದವಿರುವಾಗ, ಪಂಚಶೀಲ ತತ್ವವನ್ನು ಎರಡೂ ರಾಷ್ಟ್ರಗಳು ಒಪ್ಪಿಕೊಂಡಿರುವಾಗ ಶ್ರೀ ಚನ್ನಬಸಪ್ಪನವರು ಚೈನಾ ದೇಶದ ಬಗ್ಗೆ ಅಪಪ್ರಚಾರ ಮಾಡುವುದು ಖಂಡನೀಯವಾಗಿದೆ. ಇದು ಪಂಡಿತ್ ನೆಹರೂರವರು ಒಪ್ಪಿಕೊಂಡ ಧೋರಣೆಗೆ ವಿರೋಧವಾಗಿದೆ. ಕಾಂಗ್ರೆಸ್ ಧೋರಣೆಗೇ ವಿರೋಧವಾದ ರೀತಿಯಲ್ಲಿ ಕಾಂಗ್ರೆಸ್ ನಾಯಕರು ಪ್ರಚಾರ ಮಾಡುವುದು ಅವರ ದಿವಾಳಿತನವನ್ನು ಸೂಚಿಸುತ್ತದೆ.

ಕೊಡಗು ಕಾಂಗ್ರೆಸ್ಸಿನ ಪ್ರಮುಖ ನಾಯಕರಲ್ಲೊಬ್ಬರಾದ ಗುಂಡುಕುಟ್ಟಿ ಮಂಜನಾಥಯ್ಯನವರ ಮಗ ಶ್ರೀ ಗೋಪಾಲಕೃಷ್ಣರವರು ಸ್ವತಂತ್ರ ಉಮೇದುವಾರರಾಗಿ ನಿಂತಿರುವುದರಿಂದ ಕಾಂಗ್ರೆಸ್ಸಿಗರಿಗೆ ಇನ್ನೂ ಕಷ್ಟವಾಗಿದೆ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧವಾಗಿ ಸ್ವತಂತ್ರ ಉಮೇದುವಾರರಿಗೆ ಕೆಲಸ ಮಾಡುತ್ತಿದ್ದಾರೆ. ಇವರ ಚುನಾವಣಾ ಘೋಷಣೆಯಲ್ಲಿ ಭೂಸುಧಾರಣೆಯನ್ನು ವಿರೋಧಿಸುವುದೊಂದೇ ತನ್ನ ಗುರಿಯೆಂದು ತಿಳಿಸಿರುತ್ತಾರೆ. ದೊಡ್ಡ ಶ್ರೀಮಂತರೂ, ದೊಡ್ಡ ತೋಟ ಮಾಲಿಕರೂ ಆದ ಇವರು ಹೀಗೆ ಹೇಳಿರುವುದು ಆಶ್ಚರ್ಯವೇನಲ್ಲ. ಆದರೆ ಆ ಕ್ಷೇತ್ರದ ಸಾಮಾನ್ಯ ಜನತೆ ಅವರ ಬಣ್ಣವನ್ನು ಚೆನ್ನಾಗಿ ತಿಳಿದಿದ್ದಾರೆ.

ಕಮ್ಯೂನಿಸ್ಟ್ ಪಾರ್ಟಿಯ ಪ್ರಚಾರ ಉನ್ನತ ಮಟ್ಟದಲ್ಲಿ ನಡೆದಿದೆ. ಜನತೆಯ ಸಮಸ್ಯೆಗಳ ಬಗ್ಗೆಯೂ ಅದನ್ನು ಬಗೆಹರಿಸಲು ಕಮ್ಯೂನಿಸ್ಟ್ ಪಾರ್ಟಿಯ ಧೋರಣೆಯ ಬಗ್ಗೆಯೂ ಸಭೆಗಳಲ್ಲಿ ವಿವರಿಸಲಾಗುತ್ತಿದೆ. ಇದರಲ್ಲಿ ಕಾರ್ಮಿಕರಲ್ಲೂ ರೈತರಲ್ಲೂ ಹೊಸ ಜಾಗೃತಿ ಉಂಟಾಗುತ್ತಿದೆ. ಜನತೆ ಬಹಳ ಕುತೂಹಲದಿಂದ ಭಾಷಣಗಳನ್ನು ಕೇಳುವುದಲ್ಲದೆ ತಮ್ಮ ವರ್ಗ ಸಂಘಟನೆಗಳನ್ನು ಕಟ್ಟಲು ಮುಂದೆ ಬರುತ್ತಿದ್ದಾರೆ. ಹಲವು ಭಾಗಗಳಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಪ್ರಥಮ ಬಾರಿ ಹೋಗುತ್ತಿದ್ದು ಅದರ ಸಂದೇಶವನ್ನು ಬಡಜನರು ಸಂತೋಷದಿಂದ ಸ್ವಾಗತಿಸುತ್ತಿದ್ದಾರೆ. ಕಮ್ಯೂನಿಸ್ಟ್ ನಾಯಕರಾದ ಡಾ| ನಂಜುಂಡೇಶ್ವರ, ಬಿ. ಎನ್. ಕುಟ್ಟಪ್ಪ (ಉಮೇದ್ವಾರ), ವೈ. ಟಿ. ಐಯಪ್ಪ, ಸಿ.ಬಿ. ಮೊಣ್ಣಯ್ಯ, ಬಿ. ಎ. ಬೆಳ್ಳಿಯಪ್ಪ, ಎಂ. ಎಸ್. ಉಗ್ರಪ್ಪ ಮುಂತಾದವರು ಎಲ್ಲಾ ಕಡೆಗಳಲ್ಲೂ ಪ್ರವಾಸ ಮಾಡಿ ಪ್ರಚಾರ ಕಾರ್ಯ ನಡೆಸಿದ್ದಾರೆ. ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿಯವರಾದ ಎಂ. ಎಲ್. ಉಪಾಧ್ಯಾಯರು ಪೆರಿಯಾ ಪಟ್ಟಣ, ಸಿದ್ದಾಪುರ, ಅಮ್ಮತ್ತಿ ಕಣಿವೆ ಮುಂತಾದ ಕಡೆಗಳಲ್ಲಿ ಭಾಷಣ ಮಾಡಿ ಬಂದಿದ್ದಾರೆ. ಎಲ್ಲ ಕಡೆಗಳಲ್ಲೂ ತುಂಬಾ ಉತ್ಸಾಹ ಕಂಡುಬರುತ್ತಿದೆ.

ಒಂದು ಮುಖ್ಯ ವಿಷಯವೆಂದರೆ ಈ ಚುನಾವಣೆಯಲ್ಲಿ ಅನೇಕ ಗಣ್ಯ ಗ್ರಾಮಾಣಿಕ ಕಾಂಗ್ರೆಸ್ಸಿಗರು ಕಮ್ಯೂನಿಸ್ಟ್ ಉಮೇದುವಾರರಿಗೆ ಬೆಂಬಲ ನೀಡುತ್ತಿರುವುದು. ಪೆರಿಯಾ ಪಟ್ಣದ ಪ್ರಮುಖ ಕಾಂಗ್ರೆಸ್ ನಾಯಕರೂ, ತಾಲ್ಲೂಕಿನಲ್ಲೇ ಪ್ರಥಮವಾಗಿ ಕಾಂಗ್ರೆಸ್ ಸಂಸ್ಥೆಯನ್ನು ಸ್ಥಾಪಿಸಿದವರಾದ ಶ್ರೀ ತಮ್ಮಯ್ಯನವರು ತಮ್ಮ ಸ್ನೇಹಿತರೊಡನೆ ಕಮ್ಯೂನಿಸ್ಟ್ ಉಮೇದುವಾರರಿಗೆ ಪ್ರಚಾರ ಮಾಡುತ್ತಿದ್ದಾರೆ. ಹಳ್ಳಿ ಹಳ್ಳಿಗೆ ಅವರು ತಿರುಗಾಡುತ್ತಿದ್ದಾರೆ. ಪೆರಿಯಾ ಪಟ್ಣದ ಪ್ರಮುಖ ವ್ಯಾಪಾರಸ್ಥರಾದ ಶ್ರೀ ಎಲ್. ಉಗ್ರಪ್ಪನವರು ಇದೇ ಕಾರ್ಯದಲ್ಲಿ ತೊಡಗಿರುತ್ತಾರೆ. ಇವರೆಲ್ಲರ ಪ್ರಯತ್ನದಿಂದ ಕಮ್ಯೂನಿಸ್ಟ್ ಉಮೇದುವಾರರಿಗೆ ಹೆಚ್ಚಿನ ಬೆಂಬಲ ದೊರೆತಿದೆ. ಮೈಸೂರಿನ ಪ್ರಮುಖ ನಾಯಕರಾದ ಎಲ್. ಶ್ರೀಕಂಠಯ್ಯನವರೂ, ಪೆರಿಯಾ ಪಟ್ಣದ ಶ್ರೀ ತಿಮ್ಮಯ್ಯನವರೂ ಕೃತಜ್ಞಪೂರ್ವಕವಾಗಿ ಕುಟ್ಟಪ್ಪನವರಿಗೆ ಬೆಂಬಲ ನೀಡುತ್ತಿದ್ದಾರೆ. ಇವರೆಲ್ಲರ ಶ್ರಮದಿಂದ ಪರಿಸ್ಥಿತಿ ತುಂಬಾ ಆಶಾದಾಯಕವಾಗಿದ್ದು ಕಮ್ಯೂನಿಸ್ಟ್ ಉಮೇದುವಾರರು ಗೆಲ್ಲುವ ಸಂಭವ ಚೆನ್ನಾಗಿರುತ್ತದೆ.

ಮೊದಲನೇ ವಾರ್ಷಿಕೋತ್ಸವದಂದು ಕೇರಳ ಸರಕಾರಕ್ಕೆ ನಮ್ಮ ಅಭಿನಂದನೆ

(ಕೊನೇ ಪುಟದಿಂದ)

ಸಲು ಸರಕಾರ ಅವಶ್ಯ ಕ್ರಮ ತೆಗೆದುಕೊಳ್ಳುತ್ತಿದೆ.

ಭಾರತದ ಎಲ್ಲ ರಾಜ್ಯಗಳೂ ಸಹ ಖೋತಾ ಬಜೆಟ್ ತಯಾರಿಸಿದಲ್ಲಿ ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಉಳಿತಾಯ ಬಜೆಟ್ಟನ್ನು ಮಂಡಿಸಿತು. ತೆರಿಗೆಯ ಕ್ರಮವನ್ನು ಹೊಸ ರೀತಿಯಿಂದ ತಂದಿತು. ತೆರಿಗೆ ಹೊರಟು ಸಾಧ್ಯವಿರುವಂತ ವರ್ಗದ ಮೇಲೆ ತೆರಿಗೆ ಹಾಕಿ, ಇತರ ರಾಜ್ಯಗಳಿಗೆ ಮಾರ್ಗದರ್ಶನವಿತ್ತಿತು. ರಾಜ್ಯ ಸರಕಾರಗಳು ಸಾಧ್ಯವಿದ್ದಷ್ಟುಮಟ್ಟಿಗೆ ಖೋತಾ ಬಜೆಟ್ ತಯಾರಿಸಕೂಡದೆಂದು ಪಂಡಿತ ನೆಹರೂ ಹೇಳುತ್ತಿದ್ದುದನ್ನು ಕೇರಳ ಕಮ್ಯೂನಿಸ್ಟ್ ಸರಕಾರ ಅನುಸರಣೆಯಲ್ಲಿ ತಂದಿತು. ಉಳಿತಾಯ ಬಜೆಟ್ಟನ್ನು ತಯಾರಿಸಿ, ಆಂತರಿಕವಾಗಿ ರೂಢಿಸಲು ಸಾಧ್ಯವಿರುವ ವರಮಾನವನ್ನು ಎತ್ತಿದ ಕೇರಳ ಸರಕಾರ ಎಲ್ಲೆಡೆಗಳಿಂದಲೂ ಪ್ರಶಂಸೆಯನ್ನು ಪಡೆಯಿತು. ಕೇರಳದ ಮಾರ್ಗದರ್ಶನದಿಂದಲೇ ಇಂದು ಅನೇಕ ರಾಜ್ಯ ಸರಕಾರಗಳು ಈ ಬಾರಿ ಸ್ವಲ್ಪ ಮಟ್ಟಿಗಿನ ಉಳಿತಾಯ ಬಜೆಟ್ಟನ್ನು ಮಂಡಿಸಿವೆ ಎಂದು ಹೇಳಬಹುದು.

ಕೇರಳದ ಅಭಿವೃದ್ಧಿ ಕಾರ್ಯ ದಕ್ಷ ಆಡಳಿತೆಯಲ್ಲಿದೆ

ಒಂದು ವರ್ಷದ ಕಾಲಾವಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಕೇರಳ ಸರಕಾರ ಸಾಧಿಸಿದೆ. ಎಷ್ಟೇ ವಿರೋಧವಿದ್ದರೂ, ಅಪಪ್ರಚಾರದ ಧಾಳಿ ಇದ್ದರೂ ಅವನ್ನು ಎದುರಿಸಿ ಸುಧಾರಣೆಗಳನ್ನು ಧೈರ್ಯದಿಂದ ತರುತ್ತಿದೆ. ರಾಜ್ಯಾಂಗ ಘಟನೆಯ ಚೌಕಟ್ಟಿನಲ್ಲಿ ಸಾಧ್ಯವಿರುವ ಎಲ್ಲ ಅವಕಾಶಗಳನ್ನು ಉಪಯೋಗಿಸಿಕೊಂಡು ಕೇರಳದ ಜನತೆಯ ಜೀವನವನ್ನು ಉತ್ತಮಗೊಳಿಸಲು, ರಾಜ್ಯವನ್ನು ಅಭಿವೃದ್ಧಿಗೊಳಿಸಲು, ಸರಕಾರ ಯತ್ನಿಸುತ್ತಿದೆ. ಕಳೆದ ಒಂದು ವರ್ಷದಲ್ಲಿ ಕೇರಳದಲ್ಲಿ ಗೋಲೀಬಾರು ನಡೆದಿಲ್ಲ, ಕಾರ್ಮಿಕರ ಮೇಲೆ ಸಾರ್ವಜನಿಕರ ಮೇಲೆ ತೀವ್ರವಾದ ಪೋಲೀಸು ದಬ್ಬಾಳಿಕೆ ನಡೆದಿಲ್ಲ ಎಂಬುದು ಸರಕಾರದ ಜನಪ್ರಿಯತೆಯನ್ನು ಎತ್ತಿ ತೋರಿಸುತ್ತದೆ. ಒಂದೆರಡು ಘಟನೆಗಳಾಗಿದ್ದರೂ ಸಹ ಅದು ಹೋಲಿಸಿ ನೋಡಿದಲ್ಲಿ ಅಲ್ಪವಾದುವು. ಕೈಗಾರಿಕಾ ಶಾಂತಿಯನ್ನು ಕಾಪಾಡಿಕೊಂಡು, ಜನತೆಯ ನಡುವೆಯಿದ್ದ ಐಕ್ಯತೆಯನ್ನುಂಟುಮಾಡಿ ಸರಕಾರ ಮಹತ್ಸಾಧನೆಯನ್ನು ಮಾಡಿದೆ. ಕೇರಳದ ಏಳಿಗೆಯ ಕಾರ್ಯವು ದಕ್ಷ ಆಡಳಿತೆಯಲ್ಲಿದೆ ಎಂಬುದನ್ನು ಈ ಒಂದು ವರ್ಷದ ಆಡಳಿತೆ ಸಾಧಿಸಿದೆ.

ಕೇರಳ ರಾಜ್ಯವು ಚಿಕ್ಕದಾದರೂ, ಹೆಚ್ಚು ವಿದ್ಯಾವಂತರುಳ್ಳ ಜನಭರಿತವಾದ, ಸಂಪದ್ಯುಕ್ತವಾದ ರಾಜ್ಯವಾಗಿದೆ. ನೈಸರ್ಗಿಕ ಸಂಪತ್ತನ್ನು ಹೆಚ್ಚಾಗಿ ರೂಢಿಸಿಕೊಂಡು ಬಳಸಿದಲ್ಲಿ ಬೇಕಾದಷ್ಟು ಅಭಿವೃದ್ಧಿಗೆ ಸಾಧ್ಯವಿದೆ ವಿದೇಶೀ ಪ್ಲಾಂಟೇಷನುಗಳು ಲಾಭವನ್ನು ಸೂರೆಗೊಳ್ಳುತ್ತಿದೆ. ಈ ಪ್ಲಾಂಟೇಷನುಗಳ ರಾಷ್ಟ್ರೀಕರಣವಾದಲ್ಲಿ, ದೇಶಕ್ಕೂ ಕೇರಳ ರಾಜ್ಯಕ್ಕೂ ಬಹಳ ಅನುಕೂಲವಾಗುತ್ತದೆ. ಆದರೆ ಕೇಂದ್ರ ಸರಕಾರ ಇದಕ್ಕೆ ಅಡ್ಡಿ ಇದೆ. ಕೇಂದ್ರ ಹಾಗೂ ಕೇರಳ ರಾಜ್ಯಗಳ ನಡುವೆ ಒಳ್ಳೆಯ ಸಂಬಂಧವಿದ್ದರೂ, ಭಿನ್ನಾಭಿಪ್ರಾಯಗಳು ಇವೆ. ಕೇಂದ್ರ ಸರಕಾರವು ಮಲತಾಯಿ ಧೋರಣೆ ಅನುಸರಿಸದೆ, ಕೇರಳದ ಅಭಿವೃದ್ಧಿ ಕಾರ್ಯಕ್ಕೆ ಹೆಚ್ಚು ಗಮನ ಕೊಡುವುದಗತ್ಯವಾಗಿದೆ.

ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್, ಪಿ.ಎಸ್.ಪಿ. ಮುಸ್ಲಿಂಲೀಗ್ ಪಕ್ಷಗಳು ಪಕ್ಷಗಳು ಕೇವಲ ವಿರೋಧಕ್ಕಾಗಿ ವಿರೋಧ ಮಾಡದೆ, ಜನತೆಯ ಹಿತಸಾಧನೆಯಾಗುವ ಸರಕಾರದ ಕ್ರಮಗಳಿಗೆ ಬೆಂಬಲವಿತ್ತಲ್ಲಿ ಇನ್ನು ಹೆಚ್ಚಿನ ಸಾಧನೆಯಾಗುವುದರಲ್ಲಿ ಸಂಶಯವಿಲ್ಲ. ಆದರೆ ದುರದೃಷ್ಟವಶಾತ್ ಪರಿಸ್ಥಿತಿ ಬೇರೆಯಾಗಿದೆ. ಕೇರಳ ಸರಕಾರದ ಒಂದು ವರ್ಷದ ಕಾರ್ಯವನ್ನು ದಕ್ಷ ಆಡಳಿತೆಯನ್ನು ಅಭಿನಂದಿಸುತ್ತಾ, ಇನ್ನೂ ಹೆಚ್ಚಿನ ಸಾಧನೆಗಾಗಿ ಕೇರಳ ಸರಕಾರ ಶ್ರಮಿಸಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

ಮೊದಲನೆ ವಾರ್ಷಿಕೋತ್ಸವದಂದು ಕೇರಳ ಸರಕಾರಕ್ಕೆ ನಮ್ಮ ಅಭಿನಂದನೆ

(ಮೊದಲನೇ ಪುಟದಿಂದ)

ತ್ರಿಗಳ ಸಂಬಳವನ್ನು 500 ರೂಗಳಿಗೆ ನಿಗದಿ ಮಾಡಿತು. ಮಂತ್ರಿಗಳ ನಡವಳಿಕೆಯ ಬಗ್ಗೆ ವಿಶಿಷ್ಟವಾದ ನಿಯಮಗಳನ್ನು ಸಿದ್ಧಮಾಡಿತು. ಶ್ರೀ ನಂಬೂದ್ರಿಪಾದ್‌ರವರ ಸರ್ಕಾರದ ಈ ಕ್ರಮವನ್ನು ಕಾಂಗ್ರೆಸ್, ಪಿ. ಎಸ್. ಪಿ. ಪಕ್ಷಗಳು 'ಬೂಟಾಟಿಕೆ' ಎಂದು ಕರೆದುವು. ಆದರೆ ಜನತೆ ಒಂದು ವರ್ಷದಲ್ಲಿ ಸತ್ಯಾಂಶವನ್ನು ಅರಿತಿದೆ.

ಉಳುವ ರೈತನೇ ರಾಷ್ಟ್ರದ ಬೆನ್ನುಮೂಳೆ, ರೈತರ ಏಳಿಗೆಯೇ ರಾಷ್ಟ್ರದ ಏಳಿಗೆ, ಭೂಸುಧಾರಣೆಗಳನ್ನು ಶೀಘ್ರವಾಗಿ ಜಾರಿಗೆ ತರುವುದೇ ಕಾಂಗ್ರೆಸ್ಸಿನ ಗುರಿ ಎಂದೆಲ್ಲ ಪ್ರಚಾರ ಮಾಡುತ್ತಿದ್ದರೂ, ಕಾಂಗ್ರೆಸ್ ಆಡಳಿತೆಯು ರೈತನನ್ನು ಜಮೀನುದಾರರು ಜಮೀನುಗಳಿಂದ ಹೊರ ಹಾಕುವುದನ್ನು ತಪ್ಪಿಸಲು ಯಾವ ಆಜ್ಞೆಯನ್ನು ಸಮರ್ಪಕವಾಗಿ ತರಲಿಲ್ಲ. ಕೇರಳ ಕಮ್ಯೂನಿಸ್ಟ್ ಸರಕಾರವು ರೈತರನ್ನು ಹೊಲದಿಂದ ಹೊರದೂಡುವುದನ್ನು ತಪ್ಪಿಸಲು ಸುಗ್ರೀವಾಜ್ಞೆಯೊಂದನ್ನು ಹೊರಡಿಸಿ, ಗೇಣಿದಾರನ ಹಕ್ಕುಗಳನ್ನು ರಕ್ಷಿಸಿತು.

ಅಧ್ಯಕ್ಷರ ಆಡಳಿತೆಯ ಅಂತ್ಯದಲ್ಲಿ ಸರಕಾರದ ಉನ್ನತಾಧಿಕಾರಿಗಳ ಸಂಬಳವನ್ನು ಹೆಚ್ಚಿಸಲು ಹೊರಡಿಸಿದ್ದ ಆಜ್ಞೆಯನ್ನು ಅಧಿಕಾರಕ್ಕೆ ಬಂದ ಕೂಡಲೇ ತಡೆಹಿಡಿಯಿತು. ಸರಕಾರಿ ನೌಕರರೆಲ್ಲರಿಗೂ ಏಕ ತೆರನಾದ ಸಂಬಳ ಸಾರಿಗೆಯನ್ನು ಗೊತ್ತುಮಾಡಲು ಸರಕಾರವು ಯತ್ನಿಸುವುದೆಂದೂ, ಉನ್ನತಾಧಿಕಾರಿಗಳ ಸಂಬಳವು 1000 ರೂಗಳಿಗೆ ಮೇಲಿರಕೂಡದೆಂದೂ ಘೋಷಿಸಿತು. ಗ್ರಾಮಾಡಳಿತಾಧಿಕಾರಿಗಳ ಸಂಬಳ ಸಾರಿಗೆಯನ್ನು ಕೂಡಲೇ ಹೆಚ್ಚಿಸಿತು. ಶಾಲಾ ಉಪಾಧ್ಯಾಯರುಗಳ ಸಂಬಳದಲ್ಲಿ ಹೆಚ್ಚಳವನ್ನು ಮಾಡಿತು.

ಎಲ್ಲ ಕೈಗಾರಿಕೆಗಳಲ್ಲಿಯೂ ಸಹ ಕನಿಷ್ಟ ಕೂಲಿಯನ್ನು ನಿಗದಿ ಮಾಡಲು ಸರಕಾರ ಕ್ರಮ ತೆಗೆದುಕೊಳ್ಳುವುದೆಂದೂ, ಕೈಗಾರಿಕಾ ಶಾಂತಿಯನ್ನು ಕಾಪಾಡುವುದೇ ತನ್ನ ಗುರಿಯೆಂದೂ ಸರಕಾರ ಘೋಷಿಸಿತು. ರಾಜ್ಯದ ಔದ್ಯೋಗೀಕರಣದ ಪ್ರಶ್ನೆಯನ್ನು ಕುರಿತು ಸರಕಾರದ ನೀತಿಯನ್ನು ಸ್ಪಷ್ಟಗೊಳಿಸುವ ಹೇಳಿಕೆಯೊಂದನ್ನು ಮಾಡಿ, ಸರಕಾರೀ ಕ್ಷೇತ್ರದಲ್ಲಿ ಕೆಲವು ಕೈಗಾರಿಕೆಗಳನ್ನು ಸ್ಥಾಪಿಸುವುದೇ ಅಲ್ಲದೆ, ಖಾಸಗೀ ಬಂಡವಾಳಸ್ಥರು ಕೇರಳದಲ್ಲಿ ಕೈಗಾರಿಕೆಯನ್ನಾರಂಭಿಸಲು ಪ್ರೋತ್ಸಾಹ ಕೊಡಲಾಗುವುದೆಂದು ಸಾರಿತು.

ಕಮ್ಯೂನಿಸ್ಟ್ ಪಕ್ಷವು ಕೇರಳದಲ್ಲಿ ಅಧಿಕಾರ ವಹಿಸಿಕೊಂಡು ಒಂದು ವರ್ಷದ ಆಡಳಿತೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಿದೆ ಎಂಬುದನ್ನು ಪರಿಶೀಲಿಸೋಣ.

ಸಾಮಾನ್ಯ ಆಡಳಿತೆ

ಆಡಳಿತೆಯಲ್ಲಿ ಒಡಮೂಡಿದ್ದ ಲಂಚ ಖುಷುವತ್ತುಗಳನ್ನು ನಿರ್ಮೂಲಗೊಳಿಸಲು, ಆಡಳಿತ ಯಂತ್ರವನ್ನು ಪುನರ್ಘಟಿಸಲು ಸರಕಾರ ಕ್ರಮ ತೆಗೆದುಕೊಂಡಿದೆ. ಈವರೆಗೆ ಬಂದಿರುವ ವರದಿಗಳಂತೆ ಕೇರಳದಲ್ಲಿ ಲಂಚ ಖುಷುವತ್ತುಗಳ ಹಾವಳಿ ಇತರ ರಾಜ್ಯಗಳಿಗೆ ಹೋಲಿಸಿದಲ್ಲಿ, ಸಾಕಷ್ಟು ಕಡಿಮೆಯಾಗಿದೆ. ಆಡಳಿತೆಯನ್ನು ಪುನರ್ಘಟಿಸುವ ದೃಷ್ಟಿಯಿಂದ ಸರಕಾರವು "ಆಡಳಿತ ಸುಧಾರಣ" ಸಮಿತಿಯೊಂದನ್ನು ರಚಿಸಿದೆ. ಅದು ತಾತ್ಕಾಲಿಕ ಸುಧಾರಣೆಗಳನ್ನು ಸೂಚಿಸಿದ್ದು ಕಾರ್ಯಗತವಾಗಿದೆ.

ಆಡಳಿತ ಯಂತ್ರದಲ್ಲಿ ಮುಖ್ಯವಾಗಿ ಪೋಲೀಸು ನಡವಳಿಕೆಯ ಬಗ್ಗೆ ಸರಕಾರವು ತೆಗೆದುಕೊಂಡಿರುವ ಕ್ರಮ ಸ್ತುತ್ಯಾರ್ಹವಾಗಿದೆ. ಕೇರಳದ ಸರಕಾರ ತಳೆದಿರುವ ಧೋರಣೆಯನ್ನು ಪೋಲೀಸರ ಬಗ್ಗೆ ಬೇರಾವ ಸರಕಾರವೂ ತಳೆದಿಲ್ಲ. ಕೈಗಾರಿಕಾ ವಿವಾದಗಳಲ್ಲಿ ಪೋಲೀಸು ಪ್ರವೇಶವನ್ನು ಸರಕಾರವು ತಡೆಯಿತು. ಜನರ ನಿತ್ಯ ಜೀವನದಲ್ಲಿ ಪೋಲೀಸರಿಂದ ಆಗುತ್ತಿದ್ದ ಕಿರುಕುಳವನ್ನು ತಪ್ಪಿಸಿತು. ಎಲ್ಲ ಕೈಗಾರಿಕಾ ವಿವಾದಗಳಲ್ಲೂ ಮಾಲಿಕರ ಪರವಾಗಿ ಪೋಲೀಸರು ಪ್ರವೇಶಿಸಿ, ಲಾಠಿ ಗೋಲೀಬಾರುಗಳನ್ನು ಮಾಡಿ, ಕಾರ್ಮಿಕ ಪ್ರತಿನಿಧಿಗಳನ್ನು ಬಂಧಿಸುವುದು. ಕೇಸುಗಳನ್ನು ಹಾಕುವುದು ಕಾಂಗ್ರೆಸ್ ಆಡಳಿತೆಯಲ್ಲಿ ಪರಂಪರೆಯಾಗಿದ್ದಿತು. ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರವು ಈ ಪರಂಪರೆಯನ್ನು ತಪ್ಪಿಸಿದ್ದು ಕಾರ್ಮಿಕರಿಗೆ ದೊರೆತ ದೊಡ್ಡ ವಿಜಯವಾಗಿದೆ.

ಮರಾಮತ್ ಇಲಾಖೆಯಲ್ಲಿ, ಸರಕಾರೀ ಕೆಲಸಗಳಿಗೆ ಕಂಟ್ರಾಕ್ಟ್ ಪದ್ಧತಿಯನ್ನು ರದ್ದುಗೊಳಿಸಲು, ಆದಷ್ಟು ಮಟ್ಟಿಗೆ ನೇರವಾಗಿ ಸರಕಾರದ ಇಲಾಖೆಯ ಮೂಲಕವೇ ಕಾಮಗಾರಿಗಳನ್ನು ನಡೆಸಲು ಸರಕಾರ ಕ್ರಮ ತೆಗೆದುಕೊಂಡಿದೆ. ಪ್ರಥಮ ಹೆಜ್ಜೆಯು ಈ ದಿಶೆಯಲ್ಲಿ ಸಾರ್ವಜನಿಕ ಕಾರ್ಯಗಳನ್ನು ನಡೆಸಲು ಕಂಟ್ರಾಕ್ಟುಗಳನ್ನು ಕೆಲಸಗಾರರ ಕೋ ಆಪರೇಟಿವ್ ಸೊಸೈಟಿಗಳಿಗೆ ಕೊಡಲಾಗಿದೆ. ಇದರಿಂದ ಕಂಟ್ರಾಕ್ಟಿನ ಮೂಲಕವಾಗಿ ನಷ್ಟವಾಗುತ್ತಿದ್ದ ಹಣವು ಉಳಿತಾಯವಾಗಿದೆಯಲ್ಲದೆ, ಕೆಲಸಗಳೂ ತೃಪ್ತಿಕರವಾಗಿ ನಡೆದಿವೆಯೆಂದು ತಿಳಿದು ಬಂದಿದೆ.

ಕೈಗಾರಿಕೆ ಮತ್ತು ಕಾರ್ಮಿಕ ಕ್ಷೇತ್ರ

ಭಾರತದ ಇತರ ರಾಜ್ಯಗಳಿಗೆ ಹೋಲಿಸಿ ನೋಡಿದಲ್ಲಿ, ಕೇರಳದಲ್ಲಿ ಕಳೆದ ಒಂದು ವರ್ಷದಲ್ಲಿ ಇದ್ದ ಕೈಗಾರಿಕಾ ಶಾಂತಿ ಇನ್ನಾವ ರಾಜ್ಯದಲ್ಲೂ ಇರಲಿಲ್ಲ. ಒಂದು ವರ್ಷದ ಸಂಪೂರ್ಣ ಕೈಗಾರಿಕಾ ಶಾಂತಿ ಇದ್ದಿತು ಎಂದು ಧಾರಾಳವಾಗಿ ಹೇಳಬಹುದು. ಸ್ವತಃ ಟ್ರೇಡ್ ಯೂನಿಯನ್ ನಾಯಕರಾಗಿದ್ದ ಕಾರ್ಮಿಕ ಸಚಿವ ಟಿ. ವಿ. ಥಾಮಸ್‌ರವರ ನೇತೃತ್ವದಲ್ಲಿ ಕಾರ್ಮಿಕ ಇಲಾಖೆಯು ಗಣನೀಯವಾಗಿ ಪ್ರಗತಿಯನ್ನು ಸಾಧಿಸಿದೆ. ಎರಡು ಮೂರು ವರ್ಷಗಳಿಂದ ಇತ್ಯರ್ಥವಾಗದೆ ಇದ್ದ ವಿವಾದಗಳನ್ನು ಸಚಿವರೇ ನೇರವಾಗಿ ಸಂಧಾನ ನಡೆಸಿ ಇತ್ಯರ್ಥಗೊಳಿಸಿದ್ದಾರೆ. ಸಂಧಾನದ ಮೂಲಕ ಇತ್ಯರ್ಥವಾಗದಿದ್ದ ವಿವಾದಗಳನ್ನು ಕೈಗಾರಿಕಾ ಪಂಚಾಯ್ತಿಗೆ ಒಪ್ಪಿಸಲಾಗಿದೆ. ಒಂದು ವರ್ಷದ ಕಾಲಾವಧಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕೈಗಾರಿಕಾ ವಿವಾದಗಳು ಇತ್ಯರ್ಥವಾಗಿದೆ ಎಂದು ಸರಕಾರವು ಒದಗಿಸಿರುವ ಅಂಕಿ ಅಂಶಗಳಿಂದ ಗೋಚರವಾಗುತ್ತದೆ. ಕೇರಳ ರಾಜ್ಯದಲ್ಲಿ ದೊಡ್ಡ ಉದ್ದಿಮೆಯಾದ ಪ್ಲಾಂಟೇಷನುಗಳಲ್ಲಿ ದುಡಿಯುವ ಕಾರ್ಮಿಕರ ವೇತನವನ್ನು ಶೇಕಡ 10ರಷ್ಟು ಅಧಿಕಗೊಳಿಸಿದೆ. ಸರಕಾರೀ ಉದ್ದಿಮೆಗಳಲ್ಲಿ ದುಡಿಯುವ ನೌಕರರ ವೇತನದಲ್ಲಿ ಹೆಚ್ಚಳವನ್ನುಂಟು ಮಾಡಿದೆಯಲ್ಲದೆ, ಬೋನಸ್ ಅನ್ನು ಸಹ ಇತ್ತಿದೆ. ಹೊಸದಾದ ಕೈಗಾರಿಕಾ ಸಂಬಂಧ ಮಸೂದೆಯೊಂದನ್ನು ಸರಕಾರವು ತರಲಿದೆ ಎಂದು ಸಚಿವರು ಘೋಷಿಸಿದ್ದಾರೆ.

ಭಾರತ ಸರಕಾರದ ಆದೇಶದಂತೆ ಕೇರಳದಲ್ಲಿ ಕನಿಷ್ಠ ವೇತನವನ್ನು ಜಾರಿಗೆ ತರಲಾಗಿದೆ, ಹನ್ನೆರಡು ಹೊಸ ಕೈಗಾರಿಕೆಗಳಲ್ಲಿ ಕನಿಷ್ಟ ವೇತನವನ್ನು ಜಾರಿಗೆ ತರಲಾಗಿದೆ. ವ್ಯವಸಾಯ ಕೂಲಿಗಾರರಿಗೆ ಕನಿಷ್ಟ ವೇತನವನ್ನು ಗೊತ್ತು ಮಾಡಿರುವುದು ಕೇರಳ ಸರಕಾರದ ಮಹತ್ಸಾಧನೆ ಎಂದು ಹೇಳಬಹುದು. ಒಂದು ವರ್ಷ ಕಾಲಾವಧಿಯಲ್ಲಿ ಕೈಗಾರಿಕಾ ಶಾಂತಿಯನ್ನು ಕಾಪಾಡಿರುವುದು ಕೇರಳ ಸರಕಾರದ ಕಾರ್ಯದಲ್ಲಿ ಪ್ರಶಂಸನೀಯವಾದುದಾಗಿದೆ.

ಕೈಗಾರಿಕೋದ್ಯಮಗಳನ್ನು ಅಭಿವೃದ್ಧಿಗೊಳಿಸುವ ಕಾರ್ಯದಲ್ಲಿ ಕಮ್ಯೂನಿಸ್ಟ್ ಸರಕಾರದ ಆಡಳಿತೆಯಲ್ಲಿ ಕೇರಳ ರಾಜ್ಯವು ಮುಂದುವರಿದಿದೆ. ಇರತಕ್ಕ ಕೈಗಾರಿಕೆಗಳಿಗೆ ಹೆಚ್ಚು ಹಣವನ್ನು ಸಾಲ ಕೊಡಲಾಗಿದೆ ಮತ್ತು ಕೈಗಾರಿಕೋದ್ಯಮಗಳಲ್ಲಿ ಷೇರುಗಳನ್ನು ತೆಗೆದುಕೊಳ್ಳಲಾಗಿದೆ. ಹದಿನಾಲ್ಕು ಸಣ್ಣ ಕೈಗಾರಿಕೆಗಳನ್ನೂ, ಆರು ಕೈಗಾರಿಕಾ ಎಸ್ಟೇಟುಗಳನ್ನು ಹೊಸದಾಗಿ ಆರಂಭಿಸಲಾಗಿದೆ. ಬಾಲಿಯಪಟ್ಟಂನಲ್ಲಿ ಒಂದು ಹತ್ತಿಗಿರಣಿ, ಸೈಕಲ್ ತಯಾರಿಕೆ ಕಾರ್ಖಾನೆ ಮತ್ತು ಹೈಡ್ರೋಜಿನೇಷನ್ ಕಾರ್ಖಾನೆಯನ್ನು ಈ ವರ್ಷದಲ್ಲಿ ಆರಂಭಿಸಲಾಗಿದೆ. ಖಾದಿ ಮತ್ತು ಗ್ರಾಮ ಕೈಗಾರಿಕೆಗಳೂ ಸಹ ಈ ವರ್ಷದಲ್ಲಿ ಹೆಚ್ಚು ವಿಸ್ತಾರಗೊಂಡಿದೆ.

ಭೂಸುಧಾರಣೆ

ಭೂಸುಧಾರಣೆಯನ್ನು ಕೇರಳ ಸರಕಾರವು ಆದಷ್ಟು ಶೀಘ್ರವಾಗಿ ಜಾರಿಗೆ ತರಲು ಯತ್ನಿಸಿದೆ. ಯೋಜನಾ ಸಮಿತಿಯ ಸಲಹೆಗಳ ಆಧಾರದ ಮೇಲೆ ಸಮಗ್ರವಾದ ಪ್ರಗತಿಪರವಾದ ಭೂಸುಧಾರಣಾ ಶಾಸನವೊಂದನ್ನು ಸಿದ್ಧಗೊಳಿಸಿ ಶಾಸನ ಸಭೆಯ ಮುಂದೆ ಇರಿಸಲಾಗಿದೆ. ಭೂ ಹಿಡುವಳಿಯ ಪರಿಮಿತಿಯನ್ನು ಗೊತ್ತು ಮಾಡುವ, ಗೇಣಿದಾರನ ಹಕ್ಕನ್ನು ಭದ್ರಗೊಳಿಸುವ ಪ್ರಗತಿಪರವಾದ ಭೂಸುಧಾರಣಾ ಕಾಯಿದೆ ಸ್ವಲ್ಪ ಕಾಲಾವಧಿಯಲ್ಲೇ ಅಮಲಿಗೆ ಬರಲಿದೆ. ನಮ್ಮ ಮೈಸೂರು ರಾಜ್ಯದಲ್ಲಿ ಇನ್ನೂ ಸಹ ಶಾಸನವೊಂದನ್ನು ತಯಾರಿಸುವ ಕಾರ್ಯದಲ್ಲೇ ತೊಡಗಿದ್ದರೆ ಕೇರಳದಲ್ಲಿ ಮಸೂದೆ ಈಗಾಗಲೇ ಚರ್ಚೆಯಾಗುತ್ತಿದೆ. ಅಧಿಕಾರ ವಹಿಸಿಕೊಂಡ ಕೂಡಲೇ ರೈತರನ್ನು ಜಮೀನಿನಿಂದ ಹೊರದೂಡುವುದನ್ನು ತಡೆಗಟ್ಟಿದ್ದು ಭೂಸುಧಾರಣೆಯ ಕಾರ್ಯದಲ್ಲಿ ಕೇರಳ ಸರ್ಕಾರ ನಡೆಸಿದ ಪ್ರಥಮ ಕಾರ್ಯವಾಗಿದೆ.

ಜಮೀನಿಲ್ಲದ ರೈತರಿಗೆ ಸಾಧ್ಯವಾದಷ್ಟು ಮಟ್ಟಿಗೆ ಜಮೀನನ್ನು ಹಂಚಲು ಕೇರಳ ಸರಕಾರ ಯೋಜಿಸಿದೆ. ಬಂಜರು ಭೂಮಿಯನ್ನು ಸಾಗುವಳಿಗೆ ತರಲು ರೈತರಿಗೆ ಕೊಡಲಾಗಿದೆ. ಭೂಸುಧಾರಣೆಯ ಕಾರ್ಯವನ್ನು ಯಶಸ್ವಿಯಾಗಿ ಕೇರಳ ಸರಕಾರವು ಪೂರಯಿಸುವುದೆಂಬ ದೃಢ ನಂಬಿಕೆ ಜನತೆಯಲ್ಲಿ ಮೂಡಿದೆ.

ತೀವ್ರವಾದ ಆಹಾರ ಪರಿಸ್ಥಿತಿಯಿದ್ದಾಗ ಕೇರಳ ಸರಕಾರವು, ಆಹಾರವನ್ನು ಒದಗಿಸಲು ಸುಶ್ರಾವ್ಯವಾದ ಕಾರ್ಯ ನೆರವೇರಿಸಿದೆ. ಅಗ್ಗ ದರದ ಅಂಗಡಿಗಳನ್ನು ಎಲ್ಲೆಡೆಗಳಲ್ಲಿಯೂ ತೆರೆದು ಸಾಮಾನ್ಯ ಜನರಿಗೆ ಅಗ್ಗ ದರದಲ್ಲಿ ಆಹಾರವನ್ನೊದಗಿಸಿದೆ. ಕೇರಳ ರಾಜ್ಯದಲ್ಲಿರುವಷ್ಟು ಸಂಖ್ಯೆಯಲ್ಲಿ ಅಗ್ಗ ದರದ ಡಿಪೋಗಳು ಬೇರಾವ ರಾಜ್ಯದಲ್ಲೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಆಹಾರ ಪರಿಸ್ಥಿತಿಯನ್ನು ಎದುರಿಸಲು, ದಾಸ್ತಾನಗಾರರನ್ನು ಮಟ್ಟಹಾಕಲು ಕೇರಳ ಸರಕಾರ ಈ ವರ್ಷದಲ್ಲಿ ತೀವ್ರ ಕ್ರಮ ತೆಗೆದುಕೊಂಡಿದೆ.

ಇತರೇ ಕ್ಷೇತ್ರಗಳಲ್ಲಿ

ವಿದ್ಯಾಭ್ಯಾಸ, ವೈದ್ಯಕೀಯ ಮತ್ತಿತರ ಕ್ಷೇತ್ರಗಳಲ್ಲಿಯೂ ಸಹ ಕೇರಳ ಸರಕಾರವು ಮಹತ್ವಪೂರ್ಣವಾದ ಪ್ರಗತಿಯನ್ನು ಸಾಧಿಸಿದೆ.

ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸಿದ್ದೇ ಅಲ್ಲದೆ, ಖಾಸಗೀ ಶಾಲೆಗಳ, ಚರ್ಚುಗಳ ಹಿಡಿತದಲ್ಲಿರುವ ಶಾಲೆಗಳ ಪಾಳೆಯಗಾರೀತನವನ್ನು ಮುರಿದು, ಎಲ್ಲರಿಗೂ ಸಮಾನವಾದ ರೀತಿಯಲ್ಲಿ ವಿದ್ಯಾಭ್ಯಾಸ ದೊರಕಿಸುವಂಥ, ಉಪಾಧ್ಯಾಯರುಗಳಿಗೆ ಕೆಲಸದ ಭದ್ರತೆಯನ್ನೀಯುವಂಥ ವಿದ್ಯಾಭ್ಯಾಸ ಸುಧಾರಣಾ ಮಸೂದೆಯನ್ನೂ ಕೇರಳ ಸರಕಾರವು ಅಂಗೀಕರಿಸಿದೆ. ದೇಶಾದ್ಯಂತವೂ ದೊಡ್ಡ ವಿವಾದವನ್ನೆಬ್ಬಿಸಿದ ಈ ವಿದ್ಯಾಭ್ಯಾಸ ಮಸೂದೆಯು ಈಗ ಅಧ್ಯಕ್ಷರ ಅನುಮತಿ ಪಡೆಯಬೇಕಾಗಿದೆ. ಕೇಂದ್ರ ಸರಕಾರದ ನೀತಿಯಿಂದಾಗಿ ಮಸೂದೆ ಇಂದು ಸುಪ್ರೀಂ ಕೋರ್ಟಿನ ಮುಂದೆ ಇದೆ. ಈ ಮಸೂದೆಯು ಜಾರಿಗೆ ಬಂದಲ್ಲಿ ಕೇರಳದಲ್ಲಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗುವುದರಲ್ಲಿ ಸಂಶಯವಿಲ್ಲ.

ವೈದ್ಯಕೀಯ ಸಹಾಯಕ್ಕಾಗಿ ಕೇರಳ ಸರಕಾರವು 5 79 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದೆ. ವೈದ್ಯಕೀಯ ಸಹಾಯವನ್ನು ಎಲ್ಲೆಡೆಗಳಲ್ಲಿಯೂ ಪ್ರಸರಿ

(೯ನೇ ಪುಟ ನೋಡಿ)

REG. No. M. 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone: 3810